
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಅಫ್ಘಾನಿಸ್ತಾನ ವಿರುದ್ಧ ಶನಿವಾರ ನಡೆದ ಏಕದಿನ ಪಂದ್ಯದಲ್ಲಿ 5 ವಿಕೆಟ್ ಗಳಿಸಿದ ಭಾರತದ ಪ್ರಸಿದ್ಧ ಕೃಷ್ಣ... ಭಾರತಕ್ಕೆ 9 ವಿಕೆಟ್ ಗೆಲುವು...

21 ಜೂನ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 102 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಒತ್ತಡದ ಯುಗದಲ್ಲಿ ಯುವ ಪೀಳಿಗೆಗೆ ಯೋಗ ಪರಿಹಾರ » 2



ವಿಪತ್ತು ನಿರ್ವಹಣೆಗೆ ವಿಶೇಷ ಕಾರ್ಯಪಡೆ ರಚನೆ » 3



ಇಂದು ದೇಶಾದ್ಯಂತ ನೀಟ್-ಯುಜಿ ಮರು ಪರೀಕ್ಷೆ » 4

# ಪಡಿತರಕ್ಕೆ ಜಾತಿ ಪ್ರಮಾಣ ಪತ್ರ: ಕೇಂದ್ರ ಆಕ್ಷೇಪ

## ವರದಿ ಕೇಳಿದ ಸಚಿವ ಪ್ರಲ್ಹಾದ್ ಜೋಶಿ | ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

• ಪ್ರಜೋದಯ ವರದಿ

**ನವದೆಹಲಿ:** ಕರ್ನಾಟಕ ಸರ್ಕಾರ ಪಡಿತರಕ್ಕೆ ಜಾತಿ ಪ್ರಮಾಣ ಪತ್ರ ಲಿಂಕ್ ಮಾಡುವುದು ಕಾನೂನು ಬಾಹಿರವಾದ ಕ್ರಮವಾಗಿದ್ದು, ಈ ಬಗ್ಗೆ ಮಾಹಿತಿ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿರುವುದಾಗಿ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ತಿಳಿಸಿದ್ದಾರೆ.

ಆಹಾರ ಭದ್ರತೆ ಒದಗಿಸುವಲ್ಲಿ ಯಾವುದೇ ಜಾತಿ ಲಿಂಕ್ ಮಾಡಲು ಸಾಧ್ಯವಿಲ್ಲ ಎಂದಿರುವ ಸಚಿವರು, ಕರ್ನಾಟಕ ಸರ್ಕಾರ ಪಡಿತರಕ್ಕೆ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೇಳಿದ್ದಾರೆ. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯಡಿ ಪಡಿತರ ಪಡೆಯುವ ಫಲಾನುಭವಿಗಳಿಂದ ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ಕೇಳಲಾಗುತ್ತಿದೆ ಎಂಬ ವರದಿ ಹಿನ್ನಲೆಯಲ್ಲಿ ಜೋಶಿ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ದೇಶದ ಪ್ರತಿಯೊಬ್ಬರಿಗೂ ಆಹಾರ ಭದ್ರತೆ ಒದಗಿಸುವಲ್ಲಿ ಬದ್ಧತೆ ತೋರಿದೆ. ಯಾವುದೇ ಜಾತಿ, ಜನಾಂಗವೆಂದೆಣಿಸುತ್ತಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಪಡಿತರ




ಪಡೆಯಲು ರಾಜ್ಯ ಸರ್ಕಾರ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವುದು ನಿಜಕ್ಕೂ ದುರಂತವೇ ಸರಿ ಎಂದು ಸರ್ಕಾರದ ಕ್ರಮವನ್ನು ಖಂಡಿಸಿದ್ದಾರೆ.

**ಸಲ್ಲದ ನೀತಿ-ನಿಯಮ ಉದ್ದೇಶ ಏನು**

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅರ್ಹ ಫಲಾನುಭವಿಗಳಿಗೆ ಅವರ ಆರ್ಥಿಕ ಸ್ಥಿತಿ ಮತ್ತು ಅರ್ಹತೆ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ ಆಹಾರ ಧಾನ್ಯ ಒದಗಿಸಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಆಧಾರ್, ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆಗಳ ಯಶಸ್ವಿ ಏಕೀಕರಣದ ಹೊರತಾಗಿಯೂ ಜಾತಿ ಪ್ರಮಾಣ ಪತ್ರ ಕಡ್ಡಾಯಗೊಳಿಸುವುದರ ಹಿಂದಿನ ಉದ್ದೇಶವೇನು ಎಂದು ಪ್ರಶ್ನಿಸಿದ್ದಾರೆ. ದೇಶದ ಯಾವುದೇ ಭಾಗದಲ್ಲಿ ಅರ್ಹ ಫಲಾನುಭವಿಗಳಿಗೆ ಸಬ್ಸಿಡಿ ಆಹಾರ ಧಾನ್ಯ ಸುಲಭವಾಗಿ ಲಭ್ಯವಾಗುವಂತೆ ಕೇಂದ್ರ ಸರ್ಕಾರ ಈಗಾಗಲೇ ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಉಪಕ್ರಮವನ್ನು ಪರಿಚಯಿಸಿದೆ. ಹೀಗಿರುವಾಗ ಸ್ಥಳೀಯವಾಗಿ ಸಲ್ಲದ ನೀತಿ ನಿಯಮ ಹೇರುವುದು ಕಡುಬಡವರು ಪಡಿತರ ಪಡೆಯುವ ಆಶಯಕ್ಕೆ ವಿರುದ್ಧವಾಗಿದೆ ಎಂದು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

» ನಾಲ್ಕನೇ ಪುಟದಲ್ಲಿ



ಕರ್ನಾಟಕದಲ್ಲಿ ಪಡಿತರ ಯೋಜನೆಗೆ ಜಾತಿ ಲಿಂಕ್ ಮಾಡುತ್ತಿರುವ ಬಗ್ಗೆ ಸಂಪೂರ್ಣ ವಿವರ ಪಡೆ ಯಲು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದ ವಿವರಣೆ ಪಡೆಯಲು ಕಚೇರಿ ಉನ್ನತ ಅಧಿಕಾರಿಗಳಿಗೆ ನಿರ್ದೇಶಿಸಿದ್ದೇನೆ.
-ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

**ಗೃಹಜ್ಯೋತಿ, ಗೃಹಲಕ್ಷ್ಮಿ ಪರಿಷ್ಕರಣೆ**

ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಮೇಲೆ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ವೇಗ ಪಡೆದುಕೊಂಡಿದೆ. ಮೊದಲಿಗೆ ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆಗಳಲ್ಲಿ ಕಠಿಣ ಹಂತಗ ಳಲ್ಲಿ ಪರಿಷ್ಕರಣೆ ಆಗಲಿದೆ.
ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಶೇ.100ರಷ್ಟು ಆಗುವುದು ಖಚಿತ. ಹೀಗಾಗಿ ಇ-ಗೌರ್ನೆನ್ಸ್, ಗ್ಯಾರಂಟಿ ಅನುಷ್ಠಾನ ಸಮಿತಿ ಹಾಗು ಮಹಿಳಾ ಮತ್ತು ಮಕ್ಕಳ ಕಲ್ಯಾಣ -ಇಂಧನ ಇಲಾಖೆಯಿಂದ ಮರು ಪರಿಶೀಲನೆ ನಡೆಯಲಿದೆ.
ಫಲಾನುಭವಿಗಳ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆಯಾ ಗಿರಬೇಕು, ಮನೆಯ ಯಜಮಾನಿ ಹಾಗು ಪತಿಯ ಆಧಾರ್, ಇ-ಕೆವೈಸಿ ಆಗಿರುವ ಮೊಬೈಲ್ ನಂಬರ್ ಅನ್ನು ಕಡ್ಡಾಯ ಗೊಳಿಸಲಾಗಿದೆ. ರಾಜ್ಯದ 17 ಇ-ಸೇವಾ ಕೇಂದ್ರ, ಅಂಚೆ ಕಚೇರಿ, ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಮತ್ತು ಪಂಚಾಯಿತಿಗಳಲ್ಲಿ ಪ್ರಕ್ರಿಯೆ ನಡೆಯಲಿದೆ.

# ಪ್ರತಿ ಮಗುವಿಗೂ ತಪ್ಪದೇ ಪೋಲಿಯೋ ಹನಿ ಹಾಕಿಸಿ

• ಪ್ರಜೋದಯ ವರದಿ

**ಹಾಸನ:** ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಪ್ರತಿಯೊಂದು ಮಗುವಿಗೆ ತಪ್ಪದೇ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಮೂಲಕ ಅಭಿಯಾನ ಯಶ್ವಸಿಗೊಳಿಸಬೇಕೆಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಹೇಳಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಪಲ್ಸ್ ಪೋಲಿಯೋ ಅಭಿಯಾನ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, 0 ಯಿಂದ 5 ವರ್ಷದೊಳಗಿನ ಪ್ರತಿ ಮಕ್ಕಳಿಗೂ ಲಸಿಕೆ ಯನ್ನು ಕಡ್ಡಾಯವಾಗಿ ಹಾಕಿಸಬೇಕು. ಯಾವುದೇ ಮಕ್ಕಳನ್ನು ಲಸಿಕೆಯಿಂದ ವಂಚಿತರನ್ನಾಗಿ ಮಾಡಬಾರದು.ವಲಸೆ ಕಾರ್ಮಿಕರ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಬೇಕೆಂದರು.

ಜೂ.28 ರಂದು ನಿಗದಿತ ಬೂತ್ ಗಳಲ್ಲಿ ಪಲ್ಸ್ ಪೋಲಿಯೋ ಲಸಿಕೆ ನೀಡಲಾಗುವುದು. ಯಾವುದೇ ಮಗುವಿಗು ಲಸಿಕೆ ತಪ್ಪಿ ಹೋಗದಂತೆ ನಿಗಾ ವಹಿಸಬೇಕು. ನಗರ ಪ್ರದೇಶದಲ್ಲಿ ಜೂ. 29, 30 ಹಾಗು ಜು.1 ರಂದು ಮನೆ ಮನೆಗೆ ಭೇಟಿ ನೀಡಿ ಪಲ್ಸ್ ಪೋಲಿಯೋ ಲಸಿಕೆ ನೀಡಲಾಗುವುದು. ಅದೇ ರೀತಿ ಗ್ರಾಮೀಣ ಪ್ರದೇಶಗಳಲ್ಲಿ ಜೂ.29 ಮತ್ತು 30 ಪೋಲಿಯೋ ಲಸಿಕೆ ನೀಡಲಾಗುವುದೆಂದರು.

ಪ್ರತಿಯೊಂದು ಶಾಲೆಗಳಲ್ಲೂ ಒಂದು ಕೊಠಡಿಯನ್ನು ಪಲ್ಸ್ ಪೋಲಿಯೋ ಲಸಿಕೆ ಹಾಕಲು ಮೀಸಲಿಡಬೇಕು. ಯಾವುದೇ ತೊಂದರೆ ಆಗದಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನೋಡಿ ಕೊಳ್ಳಬೇಕು ಎಂದರು.

ಜೂ.28 ರಂದು ಬೂತ್ ಇಡುವ ಅಂಗನವಾಡಿ ಮತ್ತು ಶಾಲೆಗಳನ್ನು ಮುಂಚಿತವಾಗಿ ತೆರೆಯಬೇಕು. ಅಂಗನವಾಡಿ ಕಾರ್ಯಕರ್ತರು ಉಪಸ್ಥಿತಿ ಇರಬೇಕು. ಕಸದ ಗಾಡಿಯಲ್ಲಿ ಪಲ್ಸ್ ಪೋಲಿಯೋ ಲಸಿಕೆ ಕುರಿತು ಪ್ರಚಾರ ಮಾಡಬೇಕು. ಜಿಂಗಲ್ಸ್ ನೀಡುವ ಮುಖಾಂತರ ಸಾರ್ವಜನಿಕರಿಗೂ ಅರಿವು ಮೂಡಿಸಬೇಕು ಎಂದರು.

ಬಸ್ ನಿಲ್ದಾಣ ಮತ್ತು ಟೋಲ್ ಗಳಲ್ಲಿ ವಾಹನದಲ್ಲಿ ಸಂಚರಿಸುವ ಮಕ್ಕಳಿಗೆ ಲಸಿಕೆ ಹಾಕುವ ವ್ಯವಸ್ಥೆ ಮಾಡಬೇಕು. ಪ್ರತಿ ಇಲಾಖೆಯು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸುವಂತೆ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ|| ಅನಿಲ್ ಮತ್ತಿತರರಿದ್ದರು.



## ಜಾಮೀನು ನಿರಾಕರಣೆ: ಲಿಂಗೇಶ್ 3 ದಿನ ಸಿಐಡಿ ವಶಕ್ಕೆ

• ಪ್ರಜೋದಯ ವರದಿ

**ಹಾಸನ:** ಅಕ್ರಮವಾಗಿ ಬಗರ್ ಹುಕುಂ ಜಮೀನು ಮಂಜೂರಾತಿ ಮಾಡಿದ ಆರೋಪದಡಿ ಬಂಧನಕ್ಕೊಳ ಗಾಗಿರುವ ಬೇಲೂರು ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರಿಗೆ ಹೈಕೋರ್ಟ್ ಜಾಮೀನು ನೀಡಲು ನಿರಾಕರಿಸಿದೆ.

ಜಾಮೀನು ಕೋರಿ ಕೆ.ಎಸ್. ಲಿಂಗೇಶ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ, ಮೂರು ದಿನಗಳ ಕಾಲ ಸಿಐಡಿ ವಶಕ್ಕೆ ನೀಡಿ ಆದೇಶಿಸಿದೆ. ಸದ್ಯ ಲಿಂಗೇಶ್ ಸೇರಿ 12 ಮಂದಿ ಸಿಐಡಿ ವಶದಲ್ಲಿದ್ದಾರೆ.

ಶುಕ್ರವಾರ ಮುಂಜಾನೆ ಸಿಐಡಿ ಪೊಲೀಸರ ನೇತೃತ್ವದ 9 ತಂಡಗಳು ವಿವಿಧೆಡೆ ದಾಳಿ ನಡೆಸಿ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಮಾತ್ರವದಲ್ಲೇ ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ನಿರೀಕ್ಷಕರು, ಶಿರಸ್ತೇದಾರರು ಸೇರಿ ಕಂದಾಯ ಇಲಾಖೆ ಒಟ್ಟು 12 ಮಂದಿಯನ್ನು ವಶಕ್ಕೆ ಪಡೆ ದಿದ್ದರು. ಅದರ ಬೆನ್ನಲ್ಲೇ ಜಾಮೀನಿಗಾಗಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ವಜಾಗೊಳಿಸಿದೆ. ಆರೋಪಿಗಳನ್ನು ವಶಕ್ಕೆ ಪಡೆದಿರುವ ಸಿಐಡಿ ಅಧಿಕಾರಿಗಳು ತೀವ್ರ ವಿಚಾರಣೆಗೆ ಒಳಪಡಿಸಿ, ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ.

## ಅಡ್ಡ ಮತ ಹಾಕಿದವರ ಜೇಬಿಗೆ 50 ಕೋಟಿ ರೂ.

**ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರ ಜೇಬಿಗೆ 50 ಕೋಟಿ ರೂ., ಕ್ಷೇತ್ರ ಅಭಿವೃದ್ಧಿಗೆ 100 ಕೋಟಿ ರೂ. ಆಮಿಷ ಒಡ್ಡಲಾಗಿತ್ತು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ಅಡ್ಡ ಮತದಾನದಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಲ್ಲಿ ಬಿರುಕು ಉಂಟಾಗುವುದಿಲ್ಲ ಎಂದರು.


## ಚಲಿಸುತ್ತಿದ್ದ ಕಾರಿಗೆ ಬೆಂಕಿ: ಮೂವರು ಪ್ರಯಾಣಿಕರು ಪಾರು

• ಪ್ರಜೋದಯ ವರದಿ

**ಸಕಲೇಶಪುರ:** ಚಲಿಸುತ್ತಿದ್ದ ಕಾರಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡ ಪರಿಣಾಮ ವಾಹನ ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ತಾಲ್ಲೂಕಿನ ಮಾರನಹಳ್ಳಿ ಸಮೀಪ ನಡೆದಿದೆ.

ಧರ್ಮಸ್ಥಳದಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದ ಡಸ್ಟರ್ ಕಾರಿನಲ್ಲಿ ಮೂವರು ಪ್ರಯಾಣಿಸುತ್ತಿದ್ದರು. ಮಾರನಹಳ್ಳಿ ಸಮೀಪ ತಲುಪುತ್ತಿದ್ದಂತೆ ಕಾರಿನ ಇಂಜಿನ್ ಭಾಗದಲ್ಲಿ ಹೊಗೆ ಕಾಣಿಸಿಕೊಂಡಿದೆ. ಅದನ್ನು ಗಮನಿಸಿದ ಚಾಲಕ ತಕ್ಷಣವೇ ವಾಹನವನ್ನು ರಸ್ತೆ ಬದಿಗೆ ನಿಲ್ಲಿಸಿದ್ದಾರೆ. ಪ್ರಯಾಣಿಕರು ಕಾರಿನಿಂದ ಕೆಳಗಿಳಿದ ಕೆಲವೇ ಕ್ಷಣ ಗಳಲ್ಲಿ ಬೆಂಕಿ ವೇಗವಾಗಿ ವ್ಯಾಪಿಸಿ ವಾಹನವನ್ನು ಆವರಿಸಿದೆ. ಪರಿಣಾಮ ಡಸ್ಟರ್ ಕಾರು ಧಗಧಗಿಸಿ ಹೊತ್ತಿ ಉರಿದು ಸಂಪೂರ್ಣ ಸುಟ್ಟು ಕರಕಲಾಗಿದೆ.

ಇಂಜಿನ್ ದೋಷದಿಂದ ಬೆಂಕಿ ಕಾಣಿಸಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಕಾರಿನಲ್ಲಿದ್ದ ಮೂವರು ಪ್ರಯಾಣಿಕರು ಸಮಯಪ್ರಜ್ಞೆಯಿಂದ ವಾಹನದಿಂದ ಹೊರಬಂದ ಕಾರಣ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



## ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಶಾಸಕ: ಪ್ರೀತಮ್‌ಗೌಡ ಆರೋಪ

# ಹಾಸನ ವಿಧಾನಸಭಾ ಕ್ಷೇತ್ರದ ಆಡಳಿತ ವ್ಯವಸ್ಥೆಗೆ ಜಡತ್ವ

• ಪ್ರಜೋದಯ ವರದಿ

**ಹಾಸನ:** ಹಾಸನ ವಿಧಾನಸಭಾ ಕ್ಷೇತ್ರದ ಆಡಳಿತಕ್ಕೆ ಜಡತ್ವ ಹಿಡಿದಿದೆ. ಸ್ಥಳೀಯ ಶಾಸಕರು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಮಾಜಿ ಶಾಸಕ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ ಅವರು ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನನ-ಮರಣ ಪ್ರಮಾಣ ಪತ್ರ ಪಡೆಯಲು ಜನರಿಗೆ ಸಾಧ್ಯವಾಗುತ್ತಿಲ್ಲ. ಮಧ್ಯವರ್ತಿಗಳ ಮೂಲಕ ಇ-ಸ್ವತ್ತು ಪಡೆದುಕೊಳ್ಳುವಂತಾಗಿದೆ. ಮಹಾನಗರ ಪಾಲಿಕೆಯಲ್ಲಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಹೀಗಾಗಿ ಕಳೆದ ಮೂರ್ನಾಲ್ಕು ತಿಂಗಳಿಂದ ಕ್ಷೇತ್ರದ ಜನರು ವಿವಿಧ ಸಮಸ್ಯೆ ಹೇಳಿಕೊಂಡು ನನ್ನ ಬಳಿಗೆ ಬರುತ್ತಿದ್ದಾರೆಂದು ಹೇಳಿದರು.




ಕ್ಷೇತ್ರದ ಶಾಸಕರಿಗೆ ರಾಜಕೀಯ ಹಸ್ತಕ್ಷೇಪ ಮಾಡಬಾರದೆಂದು ಇಷ್ಟು ದಿನಗಳ ಸುಮ್ಮನಿದೆ. ಇನ್ಮುಂದೆಯಾದರೂ ಚುನಾಯಿತ ಪ್ರತಿನಿಧಿಯಾಗಿರುವ ಶಾಸಕರು ಮಹಾನಗರ ಪಾಲಿಕೆ, ತಾಲ್ಲೂಕು ಕಚೇರಿಗೆ ತೆರಳಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಲಿ. ಅವರಿಂದ ಸಾಧ್ಯವಾಗದಿದ್ದರೆ ನಾನೇ ಜನಪ್ರತಿನಿಧಿಯಾಗಿ ಕಚೇರಿ ಬಳಿ ಕುಳಿತು ಜನರ ಸಮಸ್ಯೆಗಳನ್ನು ಆಲಿಸುವ ಕೆಲಸ ಮಾಡುತ್ತೇನೆ. ಮೂರು ವರ್ಷಗಳು ಕಳೆದಿವೆ, ಈಗಲಾದರೂ ಎಚ್ಚೆತ್ತುಕೊಳ್ಳಲಿ ಎಂದರು.

ಜನನ-ಮರಣ ಪ್ರಮಾಣ ಪತ್ರ ಪಡೆಯಲು ವಾರಗಟ್ಟಲೆ ಕಾಯುವ ಸ್ಥಿತಿ ನಿರ್ಮಾಣ ವಾಗಿದೆ. ಸಂಬಂಧಪಟ್ಟ ಆಸ್ಪತ್ರೆ ಹಾಗು ಪಾಲಿಕೆಯಲ್ಲಿ ಆರಂಭಿಕ ಡೇಟಾ ಸಂಗ್ರಹಿಸಿಡುವ ಕೆಲಸವಾಗುತ್ತಿಲ್ಲ. ಅದರಿಂದ ಜನರು ಅಲೆದು, ಕಡೆಗೆ ಸಾವಿರಾರು ಖರ್ಚು ಮಾಡಿ ಕೋರ್ಟ್ ನಿಂದ ಪಡೆಯುವಂತಾಗಿದೆ. ಮೊದಲೇ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಸದಸ್ಯರಿಲ್ಲ. ಹೀಗಾಗಿ ಆತಳಿತಯಂತ್ರ ಜಡ್ಡುಗಟ್ಟಿದ್ದು, ಅದಕ್ಕೆ ಚುರುಕು ನೀಡುವ ಕೆಲಸ ಚುನಾಯಿತ ಪ್ರತಿ ನಿಧಿಗಳಿಂದ ಆಗಬೇಕೆಂದು ಒತ್ತಾಯಿಸಿದರು. ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿದ ಹಳ್ಳಿಗಳಿಗೆ ಈವರೆಗೂ ಐಡಿ ನಂಬರ್ ಸಿಗದೆ ರೈತರು, ಜನರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಖಾತೆ, ಇ-ಸ್ವತ್ತು ಮಾಡಿಸಲು ಕಾಯುವಂತಾಗಿದೆ. ಯಾವುದೇ ವಹಿವಾಟು ನಡೆಯುತ್ತಿಲ್ಲ. ಇನ್ನು ವಿವಿಧ ಬಡಾವಣೆಗಳಲ್ಲಿ ರಸ್ತೆ ಹದಗೆಟ್ಟರೆ, ಯುಜಿಡಿ ಬ್ಲಾಕ್ ಆಗಿದೆ. ಕುಡಿಯುವ ನೀರಿನ ಸಮಸ್ಯೆ ಶೀಘ್ರ ಪರಿಹಾರ ಲಕ್ಷಣ ಕಾಣುತ್ತಿಲ್ಲ ಎಂದರು.

ಹಾಸನ ಮಹಾನಗರ ಪಾಲಿಕೆ ಆದಾಗಿನಿಂದ ಒಂದೇ ಒಂದು ಹುದ್ದೆ ನೇಮಕ » ನಾಲ್ಕನೇ ಪುಟದಲ್ಲಿ

**ಇನ್ನಾದರೂ ಕ್ರಿಯಾಶೀಲರಾಗಲಿ**

ರಾಜ್ಯದಲ್ಲಿ ಸರ್ಕಾರ ಬೇರೆ ಇದೆ. ಅಭಿವೃದ್ಧಿಗೆ ಅನುದಾನ ತರುವುದು ಕಷ್ಟ ಇದೆ. ಆದರೆ ಜನರ ಸಮಸ್ಯೆಗಳಿಗೆ ಸ್ಪಂದಿಸಲು, ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಕೆಲಸ ಆಗ ಬೇಕಿದೆ. ಇನ್ನಾದರೂ ಕ್ರಿಯಾಶೀಲ ಮತ್ತು ಪರಿಣಾಮಕಾರಿ ಕೆಲಸ ಮಾಡಲಿ. ಇಲ್ಲಿ ಆಸಕ್ತಿ – ನಿರಾಸಕ್ತಿಗಿಂತ ಬದ್ಧತೆ ಬೇಕು. ಇಲ್ಲದಿದ್ದರೆ ಹೇಳೋರಿಲ್ಲ, ಕೇಳೋರಿಲ್ಲ ಎಂದು ಅಧಿಕಾರಿಗಳು ಏನನ್ನೂ ಮಾಡದೆ ಸುಮ್ಮನಿರುತ್ತಾರೆ. ಮುಂದಿನ ದಿನಗಳಲ್ಲಿ ಮೈಸೂರು ಪ್ರಾದೇಶಿಕ ಆಯುಕ್ತರನ್ನೂ ಭೇಟಿ ಮಾಡಿ 35 ವಾರ್ಡ್‌ಗಳ ಬಗ್ಗೆ ಚರ್ಚಿಸುವೆ, ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡಿದರೆ ಜನರಿಗೆ ಅನುಕೂಲವಾಗಲಿದೆ ಎಂದು ಪ್ರೀತಮ್ ಗೌಡ ಅವರು ಹೇಳಿದರು.

# ಸಕಲೇಶಪುರದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆಯನ್ನು ಮತ್ತಷ್ಟು ಬಲ ಪಡಿಸುವ ಉದ್ದೇಶದಿಂದ ಕೈಗೊಂಡಿರುವ ವಿವಿಧ ಯೋಜನೆಗಳ ಫಲವಾಗಿ ಶೀಘ್ರದಲ್ಲೇ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಹೊಸ ಬಸ್ ನಿಲ್ದಾಣ ಹಾಗು ಹಳೇ ಸಂತೇವೇರಿ ಬಡಾವಣೆಯಲ್ಲಿ ನಿರ್ಮಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಶನಿವಾರ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಸಾರ್ವಜನಿಕರ ಅನುಕೂಲಕ್ಕಾಗಿ ಎರಡೂ ಪ್ರದೇಶಗಳಲ್ಲಿ ತಲಾ 5 ಲಕ್ಷ ರೂ. ವೆಚ್ಚದಲ್ಲಿ ಒಟ್ಟು ಘಟಕಗಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಈ ಘಟಕಗಳ ಮೂಲಕ ಸಾರ್ವಜನಿಕರಿಗೆ ಅತ್ಯಂತ ಕಡಿಮೆ ದರದಲ್ಲಿ ಸುರಕ್ಷಿತ ಹಾಗು ಶುದ್ಧ ಕುಡಿಯುವ ನೀರು ಲಭ್ಯವಾಗಲಿದೆ. ನಗರ ಪ್ರದೇಶಗಳಲ್ಲಿ ಶುದ್ಧ ನೀರಿನ ಲಭ್ಯತೆ ಹೆಚ್ಚಿಸುವ ನಿಟ್ಟಿನಲ್ಲಿ ಯೋಜನೆಗಳಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ಅಮೃತ್ 2.0 ಯೋಜನೆಯಡಿ ಸುಮಾರು 15 ಕೋಟಿ ರೂ. ವೆಚ್ಚದಲ್ಲಿ ಪಟ್ಟಣದಾದ್ಯಂತ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವ ಮಹತ್ವಾಕಾಂಕ್ಷಿ ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ ಪ್ರತಿಯೊಂದು ಮನೆಗೂ ಸಮರ್ಪಕವಾಗಿ ಶುದ್ಧ ಕುಡಿಯುವ ನೀರು ಪೂರೈಕೆ ಆಗಲಿದೆ ಎಂದು ತಿಳಿಸಿದರು.

ಪಟ್ಟಣದ ನಾಗರಿಕರಿಗೆ ನಿರಂತರ ಹಾಗು ಗುಣಮಟ್ಟದ ಕುಡಿಯುವ ನೀರು ಒದಗಿಸುವ ಗುರಿಯೊಂದಿಗೆ ಕಾಮಗಾರಿಯನ್ನು ವೇಗವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸ ಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ಬಿಜೆಪಿ ಮುಖಂಡರಾದ ವಿನಯ್, ನವೀನ್ ಶೆಟ್ಟಿ, ಮದನ್, ಚಂದ್ರಣ್ಣ ಮತ್ತಿತರರಿದ್ದರು.




# ಕನ್ನಡ ಅನುಷ್ಠಾನಕ್ಕೆ ಮುತುವರ್ಜಿ ವಹಿಸಲು ಸೂಚನೆ

• ಪ್ರಜೋದಯ ವರದಿ

**ಹಾಸನ:** ಅಂಗಡಿ, ವಾಣಿಜ್ಯ ಮಳಿಗೆ ಹಾಗು ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡ ಬಳಕೆಗೆ ಆದ್ಯತೆ ನೀಡಬೇಕೆಂದು ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣವರ್ ಅವರು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಗಡಿಗಳಿಗೆ ಪರವಾನಗಿ ನೀಡುವ ಸಂದರ್ಭದಲ್ಲಿ ನಾಮಫಲಕದಲ್ಲಿ ಕಡ್ಡಾಯವಾಗಿ ಶೇ.60 ರಷ್ಟು ಕನ್ನಡ ಬಳಕೆ ಮಾಡಿರಬೇಕು. ಸರ್ಕಾರದ ಮಾರ್ಗಸೂಚಿ ಅನ್ವಯ ಶೇ.60 ಮತ್ತು 40 ಪ್ರಮಾಣದಲ್ಲಿ ಅನುಷ್ಠಾನ ಮಾಡಲು ಕ್ರಮವಹಿಸಬೇಕು. ಮಹಾನಗರ ಪಾಲಿಕೆ, ನಗರ, ಪಟ್ಟಣ ಪ್ರದೇಶಗಳಲ್ಲಿ ಅಂಗಡಿಗಳ ನಾಮಫಲಕಗಳ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಗಳು ಮಾಡುತ್ತವೆ. ಅದೇರೀತಿ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯಿ ತಿಗಳು ನಿರ್ವಹಣೆ ಮಾಡುತ್ತವೆ. ಕೈಗಾರಿಕೆಗಳಿಗೆ ಸಂಬಂಧಿಸಿ ಜಿಲ್ಲಾ ಕೈಗಾರಿಕಾ ಇಲಾಖೆ, ಖಾಸಗಿ ಆಸ್ಪತ್ರೆಗಳಿಗೆ ಸಂಬಂಧಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬ್ಯಾಂಕ್, ರಾಷ್ಟ್ರೀಯ ಹೆದ್ದಾರಿ ಹಾಗು ರೈಲ್ವೆ ನಿಲ್ದಾಣ, ಪೆಟ್ರೋಲ್ ಬಂಕ್‌ಗಳಲ್ಲಿಯೂನಾಮಫಲಕಗಳನ್ನುಕಡ್ಡಾಯವಾಗಿ ನಿಯಮನುಸಾರ ಅಳವಡಿಸಿರಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಕ್ರಮವಹಿಸಬೇಕೆಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ಅವರು ಮಾತನಾಡಿ, ಕೇಂದ್ರಿಯ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ಮಕ್ಕಳು ಕನ್ನಡ ಭಾಷೆಯನ್ನು ಕಲಿಯಲು ಕನ್ನಡ ಸಾಹಿತ್ಯ ಪರಿಷತ್ ನಡೆಸುವ ಕಾವ್ಯ, ಜಾಣ ಪರೀಕ್ಷೆಗಳನ್ನು ಪಾಸ್ ಮಾಡಿದರೆ ವೃತ್ತಿ ಜೀವನದಲ್ಲಿ ಮಕ್ಕಳಿಗೆ ಅನುಕೂಲವಾಗುತ್ತದೆಂದು ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಾದ ರಾಘವೇಂದ್ರ ಕುಮಾರ್, ಆರ್.ಬಿ.ಪುಟ್ಟೇಗೌಡ, ರತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ತಾರಾನಾಥ್ ಭಾಗವಹಿಸಿದ್ದರು.




## ಕಡೇಗರ್ಜೆಯಲ್ಲಿ ರಸ್ತೆ ದಾಟಿದ 20ಕ್ಕೂ ಹೆಚ್ಚು ಆನೆಗಳು



• ಪ್ರಜೋದಯ ವರದಿ

**ಬೇಲೂರು:** ಮಲೆನಾಡು ಭಾಗದಲ್ಲಿ ಕಾಡಾನೆಗಳ ಸಂಚಾರ ಮಿತಿ ಮೀರಿದ್ದು ತಾಲ್ಲೂಕಿನ ಕಡೇಗರ್ಜೆ ಗ್ರಾಮದಲ್ಲಿ 20ಕ್ಕೂ ಹೆಚ್ಚು ಆನೆಗಳು ರಸ್ತೆ ದಾಟಿರುವ ವಿಡಿಯೋ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ.

ಕಡೆಗರ್ಜೆ ಗ್ರಾಮ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ತೀವ್ರಗೊಂಡಿದೆ. ಮರಿಗಳು ಸೇರಿ 20ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಗ್ರಾಮ ವ್ಯಾಪ್ತಿಯಲ್ಲಿ ಕಾಣಿಸಿಕೊಂಡಿರುವುದು ಕಳವಳ ತರಿಸಿದೆ.

ತೋಟದಿಂದ ಒಮ್ಮೆಗೇ ಒಂದರ ಹಿಂದೆ ಒಂದರಂತೆ ಬಂದ ಗಜಪಡೆ, ಘೀಳಿಡುತ್ತಾ ರಸ್ತೆ ದಾಟಿವೆ. ಆನೆಗಳು ಸಂಚರಿಸುವ ವೇಳೆ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು. ಕಾಡಾನೆಗಳ ಸಂಚಾರದಿಂದ ಆತಂಕಗೊಂಡ ಕಾಫಿ ತೋಟದ ಕಾರ್ಮಿಕರು ಕೆಲಸ ನಿಲ್ಲಿಸಿ ಸುರಕ್ಷತೆಗಾಗಿ ರಸ್ತೆಗೆ ಬಂದರು.

ಜಗದೀಶ್ ಅವರಿಗೆ ಸೇರಿದ ತೋಟದಲ್ಲಿ ಸುಮಾರು 30ಕ್ಕೂ ಹೆಚ್ಚು ಕಾಡಾನೆಗಳು ಬೀಡು ಬಿಟ್ಟಿರುವುದಾಗಿ ಗ್ರಾಮಸ್ಥರು ತಿಳಿಸಿದ್ದಾರೆ.

ಕಾಡಾನೆಗಳ ನಿರಂತರ ಓಡಾಟದಿಂದ ಗ್ರಾಮಸ್ಥರು ಹಾಗು ಕೂಲಿ ಕಾರ್ಮಿಕರು ಭಯ ಭೀತರಾಗಿದ್ದು, ಕೆಲಸ ಕಾರ್ಯಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾರೆ. ಅರಣ್ಯ ಇಲಾಖೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

## 322 ಹುದ್ದೆಗಳಿಗೆ ಪ್ರಸ್ತಾವನೆ ಸಲ್ಲಿಕೆ | ಮಂಜೂರು ಮಾಡದೆ ಸ್ಪಷ್ಟನೆ ಕೇಳಿದ ಸರ್ಕಾರ

# ಹಿಮ್ಸ್‌ನಲ್ಲಿ ಸೌಲಭ್ಯ ವಿದ್ದರೂ ಚಿಕಿತ್ಸೆಗೆ ವೈದ್ಯಕೀಯ ಸಿಬ್ಬಂದಿ ಕೊರತೆ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್), ಜಿಲ್ಲಾ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ, ತಂತ್ರಜ್ಞರ ಕೊರತೆ ಎದುರಾಗಿರುವುದರಿಂದ ವೈದ್ಯಕೀಯ ಸೇವೆ ಕುಂಟಿತಗೊಳ್ಳುತ್ತಿದೆ.

ಹಿಮ್ಸ್‌ಗೆ ರಾಜ್ಯ ಸರ್ಕಾರ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಮೂಲ ಸೌಕರ್ಯ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿದೆ. ಹೊಸದಾಗಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ನಿರ್ಮಾಣ ಮಾಡಿ, ಆಧುನಿಕ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಿದೆ. ಆದರೆ, ಅಗತ್ಯಕ್ಕೆ ಅನುಗುಣವಾಗಿ ವೈದ್ಯರು, ನರ್ಸ್, ತಾಂತ್ರಿಕ ಸಿಬ್ಬಂದಿಯನ್ನು ನೀಡದೆ ಇರುವುದ ರಿಂದ ಮೂಲಭೂತ ಸೌಲಭ್ಯವಿರುವ ಹೈಟೆಕ್ ಆಸ್ಪತ್ರೆಯಲ್ಲಿ ಮಾನವ ಸಂಪನ್ಮೂಲ ಕೊರತೆ ಎದುರಾಗಿದೆ.

ಹಿಮ್ಸ್ ರಾಜ್ಯದ ಪ್ರಮುಖ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಒಂದಾಗಿದ್ದು, ಪ್ರಸ್ತುತ 200 ಎಂಬಿಬಿಎಸ್ ಸೀಟುಗಳು, ವಿವಿಧ ಸ್ನಾತಕೋತ್ತರ ವಿಭಾಗಗಳು ಹಾಗು ಬೋಧನಾ ಆಸ್ಪತ್ರೆ ಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಪ್ರತಿದಿನ ಸಾವಿರಕ್ಕೂ ಹೆಚ್ಚು ಹೊರರೋಗಿಗಳು ಚಿಕಿತ್ಸೆ ಗಾಗಿ ಆಗಮಿಸುತ್ತಿದ್ದಾರೆ. ಹಿಮ್ಸ್ ಕೇವಲ ಆಸ್ಪತ್ರೆಯಲ್ಲದೆ ವೈದ್ಯಕೀಯ ಶಿಕ್ಷಣ ಸಂಸ್ಥೆಯೂ ಆಗಿದೆ. ಹೀಗಾಗಿ ಎಂಬಿಬಿಎಸ್ ಹಾಗು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ರಾಷ್ಟ್ರೀಯ ವೈದ್ಯಕೀಯ ಆಯೋಗದ ಮಾನದಂಡಗಳಿಗೆ ಅನುಗುಣವಾಗಿ ಬೋಧಕ ಸಿಬ್ಬಂದಿ ಅಗತ್ಯವಿದೆ.

**ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಸಿಬ್ಬಂದಿ ಕೊರತೆ**

ಹೊಸದಾಗಿ ನಿರ್ಮಾಣಗೊಂಡಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಜಿಲ್ಲೆಯ ಆರೋಗ್ಯ ಸೇವೆಗೆ ಹೊಸ ಆಯಾಮ ನೀಡಿದೆ. ಗರ್ಭಿಣಿಯರು, ನವಜಾತ ಶಿಶುಗಳು ಹಾಗು ಮಕ್ಕಳಿಗೆ ವಿಶೇಷ ಚಿಕಿತ್ಸಾ ಸೌಲಭ್ಯ ಒದಗಿಸುವ ಉದ್ದೇಶದಿಂದ ಆಸ್ಪತ್ರೆ ನಿರ್ಮಿಸಲಾಗಿದ್ದರೂ ಅಗತ್ಯ ಪ್ರಮಾಣದ ವೈದ್ಯಕೀಯ ಸಿಬ್ಬಂದಿ ಲಭ್ಯ ಇಲ್ಲವಾಗಿದೆ.

» ನಾಲ್ಕನೇ ಪುಟದಲ್ಲಿ





ಆಸ್ಪತ್ರೆಯಲ್ಲಿ ವೈದ್ಯರು ಹಾಗು ಸಿಬ್ಬಂದಿ ಕೊರತೆ ಇರುವ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದ್ದು, ಅಗತ್ಯ ಸಿಬ್ಬಂದಿ ಮತ್ತು ವೈದ್ಯರ ನೇಮಕಾತಿಗೆ ಸಂಬಂಧಿಸಿದಂತೆ ವಿವರವಾದ ವರದಿ ನೀಡಿದರೆ ಮುಖ್ಯಮಂತ್ರಿ ಹಾಗು ಸಂಬಂಧಪಟ್ಟ ಸಚಿವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾ ಗುವುದು.
-ಹೆಚ್.ಪಿ.ಸ್ವರೂಪ್, ಶಾಸಕ

**(ಹಿಮ್ಸ್-ಪ್ರಸ್ತಾವನೆ)**

- ವೈದ್ಯಕೀಯ ಅಧೀಕ್ಷಕರು-1
- ಸಹ ಪ್ರಾಧ್ಯಾಪಕರ-18
- ಸಹಾಯಕ ಪ್ರಾಧ್ಯಾಪಕರು-30
- ಹಿರಿಯ ಸ್ಥಾನೀಯ ವೈದ್ಯರು-45
- ಸಿಎಂಒ-2
- ಒಟ್ಟು: 96

**(ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ-ಪ್ರಸ್ತಾವನೆ)**

- ಶುಶ್ರೂಷಾಧಿಕಾರಿಗಳು-150
- ಓ.ಟಿ. ತಂತ್ರಜ್ಞರು-15
- ಲ್ಯಾಬ್ ತಂತ್ರಜ್ಞರು-18
- ಡಾಟಾ ಎಂಟ್ರಿ ಆಪರೇಟರ್‌ಗಳು-15
- ರೇಡಿಯಾಲಜಿ ತಂತ್ರಜ್ಞರು-4
- ಎಕೋ ತಂತ್ರಜ್ಞರು-2
- ಇಸಿಜಿ ತಂತ್ರಜ್ಞರು-2
- ಎಲೆಕ್ಟ್ರಿಷಿಯನ್‌ಗಳು-5
- ಪ್ಲಂಬರ್‌ಗಳು-5
- ಬಯೋಮೆಡಿಕಲ್ ತಂತ್ರಜ್ಞರು-2
- ಎಸಿ ತಂತ್ರಜ್ಞರು-5
- ಕಾರ್ಪೆಂಟರ್‌ಗಳು-3

ಒಟ್ಟು: 226

# ಒತ್ತಡದ ಯುಗದಲ್ಲಿ ಯುವ ಪೀಳಿಗೆಗೆ ಯೋಗ ಪರಿಹಾರ

**ಭಾರತೀಯ ಯೋಗಕ್ಕೆ ಸುಮಾರು ಐದು ಸಾವಿರ ವರ್ಷಗಳಿಗೂ ಹಿಂದಿನ ಸುದೀರ್ಘ ಇತಿಹಾಸವಿದೆ. ಯೋಗ ಭಾರತೀಯರಿಗೆ ನಮ್ಮ ಪ್ರಾಚೀನ ಋಷಿಮುನಿಗಳು ನೀಡಿದಂತಹ ಒಂದು ಅತ್ಯದ್ಭುತವಾದ ವಿಜ್ಞಾನವಾಗಿದೆ. ಯೋಗದಿಂದ ಆರೋಗ್ಯಕ್ಕೆ ಏನೆಲ್ಲಾ ಪ್ರಯೋಜನಗಳಿವೆ ಎಂಬ ಕುರಿತು ಮಂಗಳೂರಿನ ಯೋಗಪಟು ರಶ್ಮಿ ಬರಾಳು ಅವರ ಲೇಖನ ಇಲ್ಲಿದೆ.**



ಆಧುನಿಕ ಜೀವನಶೈಲಿಯೇ ಹಾಗೆ; ಎಲ್ಲದರಲ್ಲೂ ಹರಿಬಿರಿ, ಎಲ್ಲದಕ್ಕೂ ಗಡಿಬಿಡಿ. ಇಲ್ಲಿ ನಿಧಾನ, ಸಮಾಧಾನಗಳಿಗೆ ವ್ಯವಧಾನವೇ ಇಲ್ಲದ ಅವಸರ ಮತ್ತು ಆತುರ. ನೆಂಟರಿಷ್ಟರು, ಪರಿಚಯಸ್ಥರ ಜೊತೆಗೆಯೋಗಲಿ, ಸ್ವಂತ ಕುಟುಂಬದವರ ಜೊತೆಗೂ ಹತ್ತು ನಿಮಿಷ ಸಂಯಮದಿಂದ, ಸಂತೋಷದಿಂದ ಕಾಲಕಳೆಯುವಷ್ಟು ಸಮಯ ಯಾರ ಬಳಿಯೂ ಇಲ್ಲ. ಆಧುನಿಕ ಯಂತ್ರಗಳ ಯುಗದಲ್ಲಿ ಮನುಷ್ಯರೂ ಯಂತ್ರಗಳಂತೆಯೇ ಆಗಿಹೋಗಿದ್ದಾರೇನೋ ಎನ್ನಿಸಿಬಿಡುತ್ತದೆ. ಮಾನವನ ಸಹಜ ಭಾವನೆಗಳ ಅಭಿವ್ಯಕ್ತಿಗೂ ಇಲ್ಲಿ ಸಮಯದ ಅಭಾವ. ಇಂತಹ ಯಾಂತ್ರಿಕ ಬದುಕಿನ ನೇರ ಪರಿಣಾಮಕ್ಕೆ ಒಳಗಾಗುತ್ತಿರುವುದು ಇಂದಿನ ಯುವ ಪೀಳಿಗೆ.

ತಂತ್ರಜ್ಞಾನದ ಅತಿಯಾದ ಬಳಕೆ, ಉದ್ಯೋಗದ ಪೈಪೋಟಿ, ಮತ್ತು ಭವಿಷ್ಯದ ಆತಂಕಗಳು ಯುವಕರಲ್ಲಿ ತೀವ್ರ ಮಾನಸಿಕ ಒತ್ತಡ, ಖಿನ್ನತೆ ಹಾಗೂ ದೈಹಿಕ ಆಯಾಸವನ್ನು ಸೃಷ್ಟಿಸುತ್ತಿವೆ. ಇದು ಅವರ ದೈಹಿಕ ಆರೋಗ್ಯವಷ್ಟೇ ಅಲ್ಲದೆ ಮಾನಸಿಕ ಆರೋಗ್ಯದ ಮೇಲೂ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ.

**ಸದೃಢ ದೇಹದಲ್ಲಿ ಸದೃಢ ಮನಸ್ಸು:**

ನಾಯಮಾತ್ಮಾ ಬಲಹೀನೇನ ಲಭ್ಯಃ ಅಂದರೆ ಬಲಹೀನರಿಗೆ ಆತ್ಮಸಾಕ್ಷಾತ್ಕಾರ ಸಾಧ್ಯವಿಲ್ಲ ಎನ್ನುತ್ತದೆ ಉಪನಿಷತ್ತಿನ ಒಂದು ಶ್ಲೋಕ.

ಆರೋಗ್ಯವಂತ ದೇಹದಲ್ಲೇ ಆರೋಗ್ಯವಂತ ಮನಸ್ಸು ನೆಲೆಸಲು ಸಾಧ್ಯ ಎಂದಿದ್ದರು ಸ್ವಾಮಿ ವಿವೇಕಾನಂದರು. ಯುವಕರು ಮೊದಲು ದೈಹಿಕವಾಗಿ ಶಕ್ತಿವಂತರಾಗಬೇಕು, ಆಗ ಮಾತ್ರ ಮಾನಸಿಕ ಏಕಾಗ್ರತೆ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಸಾಧಿಸಲು ಸಾಧ್ಯ ಎಂಬುದು ಅವರ ಅಭಿಪ್ರಾಯವಾಗಿತ್ತು.

ಇಂದಿನ ಯುವ ಪೀಳಿಗೆ ಜಿಮ್‌ಗಳಲ್ಲಿ ಬೆವರಿಳಿಸಿ ಕಸರತ್ತು ಮಾಡಿ ಕೇವಲ ಬಾಹ್ಯ ಸ್ನಾಯುಗಳನ್ನು ಬೆಳೆಸಲಷ್ಟೇ ಆದ್ಯತೆ ನೀಡುತ್ತಿದ್ದಾರೆ. ಅದನ್ನೇ ದೈಹಿಕ ಶಕ್ತಿ ವರ್ಧನೆ, ಆರೋಗ್ಯ ಎಂದುಕೊಂಡಿದ್ದಾರೆ. ಇದರಿಂದ ಆಧುನಿಕ ಜೀವನ ಶೈಲಿ ಮನಸ್ಸಿನ ಮೇಲೆ ಬೀರುತ್ತಿರುವ ಒತ್ತಡದ ಪರಿಣಾಮ ಕಡಿಮೆ ಆಗುತ್ತಿದೆಯೇ ಅಥವಾ ಇನ್ನು ಹೆಚ್ಚಾಗುತ್ತಿದೆಯೇ ಎಂಬುದನ್ನು ಯೋಜಿಸಬೇಕಲ್ಲವೇ? ಮನುಷ್ಯನ ಸದೃಢ ಬದುಕಿಗೆ ದೈಹಿಕ ಮತ್ತು ಮಾನಸಿಕ ಆರೋಗ್ಯದ ಜೊತೆಗೆ ಆತ್ಮ ಶಕ್ತಿ ಕೂಡ ಅಷ್ಟೇ ಪ್ರಮುಖವಾದುದು. ಇವೆಲ್ಲದರ ಸಮತೋಲಿತ ಸಮ್ಮಿಲನ ಯೋಗದಿಂದ ಮಾತ್ರ ಸಾಧ್ಯವಾಗುವಂತದ್ದು.

**ದೇಹ - ಮನಸ್ಸು - ಅತ್ಮಗಳ ಸಂಯೋಜನೆ:**

ಪ್ರಾಚೀನ ಗ್ರಂಥಗಳ ಪ್ರಕಾರ, ಯೋಗ ಎಂಬ ಪದವು ಸಂಸ್ಕೃತದ ಯುಜ್ ಎಂಬ ಧಾತುವಿನಿಂದ ಬಂದಿದ್ದು, ಜೋಡಿಸುವುದು ಅಥವಾ ಸಂಯೋಜಿಸುವುದು ಎಂಬ ಅರ್ಥವನ್ನು ನೀಡುತ್ತದೆ. ಯೋಗ ಎಂದರೆ ಕೇವಲ ದೈಹಿಕ ಕಸರತ್ತಲ್ಲ; ಅದು ದೇಹ, ಮನಸ್ಸು ಮತ್ತು ಆತ್ಮವನ್ನು ಒಂದಾಗಿಸುವ ಮಹಾನ್ ಕಲೆ. ಇಂದಿನ ಯುವ ಪೀಳಿಗೆಯ ದೊಡ್ಡ ಸಮಸ್ಯೆ ಏನೆಂದರೆ, ಅವರ ದೇಹ ಎಲ್ಲೋ ಇರುತ್ತದೆ, ಮನಸ್ಸು ಇನ್ಯಾವುದೋ ಆಲೋಚನೆಯಲ್ಲಿ ತೇಲುತ್ತಿರುತ್ತದೆ. ಈ ಅಸಮತೋಲನವೇ ಒತ್ತಡಕ್ಕೆ ಪ್ರಮುಖ ಕಾರಣ.

ಭಗವದ್ಗೀತೆಯು ಸಮತ್ವಂ ಯೋಗ ಉಚ್ಯತೇ ಅಂದರೆ ಮನಸ್ಸಿನ ಸಮಸ್ಥಿತಿಯೇ ಯೋಗ ಎಂದು ಹೇಳುತ್ತದೆ. ಯೋಗಾಭ್ಯಾಸದ ಮೂಲಕ ಯುವಕರು ತಮ್ಮ ದೇಹ ಮತ್ತು ಮನಸ್ಸಿನ ನಡುವೆ ಸಾಮರಸ್ಯವನ್ನು ಏರ್ಪಡಿಸಿಕೊಂಡಾಗ, ಓದಿನಲ್ಲಿ ಅಥವಾ ಅವರು ಮಾಡುವ ಕೆಲಸದಲ್ಲಿ ಅದ್ಭುತವಾದ ಏಕಾಗ್ರತೆ ಮತ್ತು ನೈಪುಣ್ಯತೆ ತಾನಾಗಿಯೇ ಮೂಡಿಬರುತ್ತದೆ. ಅದರಿಂದಾಗಿ ಮನಸ್ಸಿನ ಒತ್ತಡ ಕೂಡ ತಾನಾಗಿಯೇ ಕಡಿಮೆಯಾಗುತ್ತದೆ.



ಯೋಗವು ದೇಹದ ಒಳಗಿನ ಅಂಗಾಂಗಗಳನ್ನು ಮತ್ತು ನರಮಂಡಲವನ್ನು ಸದೃಢಗೊಳಿಸುತ್ತದೆ. ಯೋಗದ ಮೂಲಕ ಸಿಗುವ ದೈಹಿಕ ಶಕ್ತಿಯೇ ಮನಸ್ಸನ್ನು ಶಾಂತವಾಗಿಡಲು ಇರುವ ಅಡಿಪಾಯ.

ಯೋಗ ಎಂದರೆ ಕೇವಲ ದೈಹಿಕ ಕಸರತ್ತಲ್ಲ; ಅದು ದೇಹ, ಮನಸ್ಸು ಮತ್ತು ಆತ್ಮವನ್ನು ಜೋಡಿಸುವ ಅದ್ಭುತ ಕಲೆ. ಯೋಗದಲ್ಲಿನ ಪ್ರಾಣಾಯಾಮ ಮತ್ತು ಧ್ಯಾನವು ಚದುರಿಹೋಗುವ ಯುವ ಮನಸ್ಸನ್ನು ಏಕಾಗ್ರತೆಯತ್ತ ತರುತ್ತದೆ. ಪ್ರತಿದಿನ ಕೇವಲ ಇಪ್ಪತ್ತು ನಿಮಿಷಗಳ ಯೋಗಾಭ್ಯಾಸವು ಮೆದುಳಿಗೆ ರಕ್ತಸಂಚಲನವನ್ನು ಹೆಚ್ಚಿಸಿ, ಧನಾತ್ಮಕ ಆಲೋಚನೆಗಳನ್ನು ಜಾಗೃತಗೊಳಿಸುತ್ತದೆ. ಇದು ಯುವಕರಲ್ಲಿ ತಾಳ್ಮೆ ಮತ್ತು ಸಮಾಧಾನವನ್ನು ಬೆಳೆಸುವ ಮೂಲಕ ಅವರ ಬದುಕಿನ ಸರ್ವತೋಮುಖ ಏಳಿಗೆಗೆ ದಾರಿದೀಪವಾಗುತ್ತದೆ.


**ಭಾರತೀಯ ಯೋಗಕ್ಕೆ ಜಾಗತಿಕ ಮನ್ನಣೆ:**

ಭಾರತೀಯ ಯೋಗಕ್ಕೆ ಸುಮಾರು ಐದು ಸಾವಿರ ವರ್ಷಗಳಿಗೂ ಹಿಂದಿನ ಸುದೀರ್ಘ ಇತಿಹಾಸವಿದೆ. ಯೋಗ ಭಾರತೀಯರಿಗೆ ನಮ್ಮ ಪ್ರಾಚೀನ ಋಷಿಮುನಿಗಳು ನೀಡಿದಂತಹ ಒಂದು ಅತ್ಯದ್ಭುತವಾದ ವಿಜ್ಞಾನ. ಆದರೆ ಹಿತ್ತಲ ಗಿಡ ಮದ್ದಲ್ಲ ಎಂಬ ಗಾದೆ ಮಾತಿನಂತೆ ನಾವುಗಳೇ ಯೋಗದ ಮಹತ್ವ ಅರಿಯದೆ ಯೋಗವನ್ನು ಕಡೆಗಣಿಸಿದ್ದೇವೆ.

**ಭಾರತೀಯ ಯೋಗದ ಇತಿಹಾಸ ಮತ್ತು ಜಾಗತಿಕ ಮನ್ನಣೆ:**

ಭಾರತೀಯ ಯೋಗಕ್ಕೆ ಸುಮಾರು ಐದು ಸಾವಿರ ವರ್ಷಗಳಿಗೂ ಹಿಂದಿನ ಸುದೀರ್ಘ ಇತಿಹಾಸವಿದೆ. ಯೋಗ ಭಾರತೀಯರಿಗೆ ನಮ್ಮ ಪ್ರಾಚೀನ ಋಷಿಮುನಿಗಳು ಮತ್ತು ಯೋಗಿಗಳು ನೀಡಿದಂತಹ ಒಂದು ಅತ್ಯದ್ಭುತವಾದ ಜೀವನ ವಿಜ್ಞಾನ. ಆದರೆ ಹಿತ್ತಲ ಗಿಡ ಮದ್ದಲ್ಲ ಎಂಬ ಗಾದೆ ಮಾತಿನಂತೆ, ನಮ್ಮದೇ ಆದ ಈ ಅಮೂಲ್ಯ ಕೊಡುಗೆಯ ಮಹತ್ವವನ್ನು ಅರಿಯದೆ ನಾವುಗಳೇ ಯೋಗವನ್ನು ಕಡೆಗಣಿಸುತ್ತಾ ಬಂದಿದ್ದೇವೆ. ನಾವು ನಿರ್ಲಕ್ಷಿಸಿದ ಇದೇ ಯೋಗದ ಶಕ್ತಿಯನ್ನು ಇಂದು ಪಾಶ್ಚಿಮಾತ್ಯ ದೇಶಗಳು ಮುಕ್ತಕಂಠದಿಂದ ಒಪ್ಪಿಕೊಂಡಿವೆ. ಇಂದು ಜಗತ್ತಿನಾದ್ಯಂತ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸುವ ಮೂಲಕ ಇಡೀ ವಿಶ್ವವೇ ಭಾರತದ ಈ ಜ್ಞಾನಕ್ಕೆ ತಲೆಬಾಗಿದೆ. ವಿದೇಶಿಗರು ಯೋಗವನ್ನು ತಮ್ಮ ಜೀವನದ ಭಾಗವಾಗಿಸಿಕೊಳ್ಳುತ್ತಿದ್ದಾರೆ. ಆದರೆ, ಮೂಲ ಧೀಮಂತ ಸಂಸ್ಕೃತಿಯನ್ನು ಹೊಂದಿರುವ ಭಾರತದ ಯುವ ಪೀಳಿಗೆ ಮಾತ್ರ ಪಾಶ್ಚಿಮಾತ್ಯರ ಜಂಕ್ ಫುಡ್ ಹಾಗೂ ಯಾಂತ್ರಿಕ ಸಂಸ್ಕೃತಿಗೆ ಮರುಳಾಗಿ ನೆಮ್ಮದಿ ಕಳೆದುಕೊಳ್ಳುತ್ತಿರುವುದು ವಿಷಾದನೀಯ ಸಂಗತಿಯಾಗಿ. ನಮ್ಮದೇ ನೆಲದ ನಮ್ಮದೇ ಸಂಸ್ಕೃತಿಯ ಮನುಕುಲಕ್ಕೆ ಅತ್ಯಗತ್ಯವಾದ ಈ ಯೋಗ ಸಂಸ್ಕೃತಿ ಎಂಬ ಸಂಜೀವಿನಿಯನ್ನು ಯುವಕರು ಇನ್ನು ಮುಂದಾದರೂ ಗುರುತಿಸಿ, ಹೆಮ್ಮೆಯಿಂದ ಅಳವಡಿಸಿಕೊಳ್ಳಬೇಕಿದೆ.

ಯುವ ಪೀಳಿಗೆಯೇ ದೇಶದ ನಿಜವಾದ ಶಕ್ತಿ ಮತ್ತು ಭವಿಷ್ಯ. ಆದರೆ ಇಂದಿನ ಯಾಂತ್ರಿಕ ಯುಗದಲ್ಲಿ ಯುವಕರು ಒತ್ತಡಕ್ಕೆ ಸಿಲುಕಿ ತತ್ತರಿಸುತ್ತಿದ್ದಾರೆ. ಮನಶಾಂತಿಗಾಗಿ ಹಂಬಲಿಸುತ್ತಿದ್ದಾರೆ.



ಯೋಗದ ಬಗ್ಗೆ ನಮ್ಮ ಸಮಾಜದಲ್ಲಿ ಹತ್ತು ಹಲವು ತಪ್ಪು ಕಲ್ಪನೆಗಳಿವೆ

ಮಧ್ಯವಯಸ್ಕರು, ವಯೋವೃದ್ಧರು ಅಥವಾ ರೋಗಿಗಳಿಗೆ ಮಾತ್ರ ಯೋಗ ಸೂಕ್ತ, ಯೋಗ ಎಂಬುದು ಕೇವಲ ಹಿಮಾಲಯದ ಯೋಗಿಗಳಿಗೆ ಅಥವಾ ಸನ್ಯಾಸಿಗಳಿಗೆ ಮಾತ್ರ ಸೀಮಿತ, ಅದು ಗೃಹಸ್ಥರಿಗಲ್ಲ, ಮಹಿಳೆಯರಿಗಲ್ಲ ಎಂಬೆಲ್ಲ ರೀತಿಯ ತಪ್ಪು ಅಭಿಪ್ರಾಯಗಳಿವೆ. ಕೆಲವರಂತೂ ಸಣ್ಣಗಿರುವವರು (ಕೃಶವಾಗಿರುವವರು) ಯೋಗ ಮಾಡಿದರೆ ಮತ್ತಷ್ಟು ಕೃಶರಾಗುತ್ತಾರೆ ಎಂದೂ, ಯೋಗವನ್ನು ಒಮ್ಮೆ ಆರಂಭಿಸಿ ನಂತರ ಬಿಟ್ಟರೆ ಅತಿಯಾಗಿ ದಪ್ಪಗಾಗುತ್ತಾರೆ ಎಂದೂ ನಂಬಿದ್ದಾರೆ. ಆದರೆ ಇವೆಲ್ಲವೂ ಸಂಪೂರ್ಣ ಸುಳ್ಳು ಮತ್ತು ಆಧಾರರಹಿತ ಕಲ್ಪನೆಗಳು. ಯೋಗ ಎಂಬುದು ಯಾವುದೇ ಒಂದು ವಯಸ್ಸು, ಲಿಂಗ ಅಥವಾ ವರ್ಗಕ್ಕೆ ಸೀಮಿತವಾದ ಧಾರ್ಮಿಕ ಆಚರಣೆಯಲ್ಲ; ಅದು ಇಡೀ ಮಾನವಕುಲಕ್ಕೆ ಭಾರತೀಯ ಜ್ಞಾನ ಪರಂಪರೆ ನೀಡಿರುವ ವೈಜ್ಞಾನಿಕ ಜೀವನಪದ್ಧತಿ. ಯೋಗವು ದೇಹದ ತೂಕವನ್ನು ಕೇವಲ ಇಳಿಸುವುದಿಲ್ಲ, ಬದಲಿಗೆ ದೇಹದ ಅಗತ್ಯಕ್ಕೆ ತಕ್ಕಂತೆ ತೂಕವನ್ನು ಸಮತೋಲನದಲ್ಲಿಡುತ್ತದೆ. ಸಣ್ಣಗಿರುವವರಿಗೆ ದೈಹಿಕ ಶಕ್ತಿ ನೀಡಿ ಸದೃಢಗೊಳಿಸಿದರೆ, ದಪ್ಪಗಿರುವವರಿಗೆ ದೈಹಿಕ ಚಟುವಟಿಕೆ ನೀಡಿ ಆರೋಗ್ಯ ಕಾಪಾಡುತ್ತದೆ. ಹೀಗಾಗಿ, ಯೋಗವನ್ನು ಮಕ್ಕಳು, ಯುವಕರು, ಮಹಿಳೆಯರು ಹಾಗೂ ವೃದ್ಧರು ಸೇರಿದಂತೆ ಎಲ್ಲಾ ವಯೋಮಾನದವರೂ ತಮ್ಮ ಶಕ್ತಿಗೆ ಅನುಗುಣವಾಗಿ ಸುಲಭವಾಗಿ ಮಾಡಬಹುದು.


**ಸ್ಥಿರಂ ಸುಖಂ ಆಸನಂ**

ಯೋಗ ಎಂದರೆ ದೇಹವನ್ನು ವಿಚಿತ್ರವಾಗಿ ಬಗ್ಗಿಸುವ ಕಷ್ಟದ ಸರ್ಕಸ್ ಎಂದು ಇಂದಿನ ಯುವಕರು ಭಾವಿಸಿದ್ದಾರೆ. ಆದರೆ ಮಹರ್ಷಿ ಪತಂಜಲಿ ಅವರು ಸ್ಥಿರಂ ಸುಖಂ ಆಸನಂ ಅಂದರೆ ಯಾವ ಭಂಗಿ ದೇಹಕ್ಕೆ ಸ್ಥಿರತೆ ಮತ್ತು ಸುಖವನ್ನು ನೀಡುತ್ತದೆಯೋ ಅದೇ ಆಸನ ಎಂದು ಸರಳವಾಗಿ ವ್ಯಾಖ್ಯಾನಿಸಿದ್ದಾರೆ. ಆದ್ದರಿಂದ ಕಠಿಣ ಆಸನಗಳ ಅಗತ್ಯವಿಲ್ಲದೆ, ಸರಳ ಭಂಗಿಗಳಿಂದಲೇ ಯೋಗವನ್ನು ಆರಂಭಿಸಬಹುದು.

ಯೋಗ ಧರ್ಮವಲ್ಲ, ಅದೊಂದು ಜೀವ ವಿಜ್ಞಾನ; ಅದು ಆರೋಗ್ಯದ ವಿಜ್ಞಾನ, ಯೌವನದ ವಿಜ್ಞಾನ ಮತ್ತು ದೇಹ-ಮನಸ್ಸುಗಳನ್ನು ಜೋಡಿಸುವ ವಿಜ್ಞಾನ. ಜಗತ್ತಿಗೆ ಯೋಗವನ್ನು ಪರಿಚಯಿಸಿದ ಸನಾತನ ಸಂಸ್ಕೃತಿಯ ಭಾರತ ಭೂಮಿಯ ಯುವಕರಾದ ನಾವು, ನಮ್ಮ ಪೂರ್ವಜರ ಜ್ಞಾನದ ಮೌಲ್ಯವನ್ನು ಅರಿತುಕೊಳ್ಳಬೇಕಿದೆ. ದಿನದ 24 ಗಂಟೆಗಳ ಬಿಡುವಿರದ ಬದುಕಿನಲ್ಲಿ ಕೇವಲ ಹದಿನೈದರಿಂದ ಇಪ್ಪತ್ತು ನಿಮಿಷಗಳನ್ನು ಯೋಗ, ಪ್ರಾಣಾಯಾಮ ಮತ್ತು ಧ್ಯಾನಕ್ಕಾಗಿ ಮೀಸಲಿಟ್ಟರೆ ಸಾಕು. ಅದ್ಭುತ ಆರೋಗ್ಯದ ಜೊತೆಗೆ ನೆಮ್ಮದಿಯಿಂದ ಕೂಡಿದ ಒತ್ತಡರಹಿತ ಯಶಸ್ವೀ ಜೀವನ ನಮ್ಮದಾಗುತ್ತದೆ. ಇಂದಿನಿಂದಲೇ ಯೋಗವನ್ನು ನಮ್ಮ ಜೀವನಶೈಲಿಯ ಭಾಗವಾಗಿಸಿಕೊಳ್ಳೋಣ.

ಒತ್ತಡಮುಕ್ತ, ಆರೋಗ್ಯವಂತ ಮತ್ತು ಸಶಕ್ತ ಭಾರತದ ನಿರ್ಮಾಣಕ್ಕೆ ನಮ್ಮಿಂದಲೇ ಮುನ್ನುಡಿ ಬರೆಯೋಣ. ಆರೋಗ್ಯಕರ ವಯಸ್ಸಿಗೆ ಯೋಗ ಎಂಬ 2026 ಜೂನ್ 21 ರ ಯೋಗ ದಿನದ ಧ್ಯೇಯ ವಾಕ್ಯದೊಂದಿಗೆ ಯೋಗವನ್ನು ನಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡು ಸದೃಢರಾಗಿ, ಒತ್ತಡ ಮುಕ್ತರಾಗಿ ಬಾಳೋಣ.

**- ರಶ್ಮಿ ಬರಾಳು,** ಮಂಗಳೂರು
(ಲೇಖಕರು ಯೋಗಪಟು, ಹವ್ಯಾಸಿ ಬರಹಗಾರ್ತಿ)




# ಜಾಗತಿಕ ಯೋಗಕ್ಷೇಮ ಉತ್ತೇಜಿಸುತ್ತಿದೆ ಯೋಗ

ಜೂನ್ 21 ರಂದು ಆಚರಿಸಲಾಗುವ ಅಂತರರಾಷ್ಟ್ರೀಯ ಯೋಗ ದಿನವು ಪ್ರಾಚೀನ ಭಾರತೀಯ ಅಭ್ಯಾಸದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಯೋಜನಗಳನ್ನು ಎತ್ತಿ ತೋರಿಸುತ್ತದೆ.

ಇದು ಜಾಗತಿಕ ಯೋಗಕ್ಷೇಮವನ್ನು ಉತ್ತೇಜಿಸುತ್ತದೆ, ಸಂಸ್ಕೃತಿಗಳಾದ್ಯಂತ ಜನರನ್ನು ಒಂದುಗೂಡಿಸುತ್ತದೆ ಮತ್ತು ಚಿಂತನಶೀಲ ಜೀವನದ ಮೂಲಕ ಆರೋಗ್ಯಕರ, ಒತ್ತಡ-ಮುಕ್ತ ಜೀವನಶೈಲಿಯನ್ನು ಪ್ರತಿಪಾದಿಸುತ್ತದೆ.

ಯೋಗವು ಭಾರತದಲ್ಲಿ ಹುಟ್ಟಿಕೊಂಡ ಪ್ರಾಚೀನ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸವಾಗಿದೆ. ಯೋಗ ಎಂಬ ಪದವು ಸಂಸ್ಕೃತದಿಂದ ಬಂದಿದೆ ಪತಂಜಲಿ ಯೋಗದ ಪ್ರಕಾರ ಯೋಗಶ್ಚಿತ್ತವೃತ್ತಿನಿರೋಧಃ ||1.2||

ಯೋಗ ಎಂದರೆ ಮನಸ್ಸಿನ ಏರಿಳಿತಗಳನ್ನು ಸಂಪೂರ್ಣವಾಗಿ ನಿಗ್ರಹಿಸುವುದು ಎಂದರ್ಥ.

**★ದೈಹಿಕ ಸ್ವಾಸ್ಥ್ಯ:★** ನಿಯಮಿತ ಆಸನಗಳು ದೇಹದ ಸ್ನಾಯುಗಳನ್ನು ಬಲಪಡಿಸುತ್ತವೆ, ಸದೃಢಗೊಳಿಸುತ್ತವೆ ಮತ್ತು ದೇಹದ ಭಂಗಿಯನ್ನು ಸುಧಾರಿಸುತ್ತವೆ.

**★ಮಾನಸಿಕ ಸ್ವಾಸ್ಥ್ಯ:★** ಪ್ರಾಣಾಯಾಮ ಮತ್ತು ಧ್ಯಾನ ಒತ್ತಡ, ಆತಂಕ ಮತ್ತು ಖಿನ್ನತೆಯನ್ನು ದೂರ ಮಾಡುತ್ತವೆ. ಇದು ಮೆದುಳಿಗೆ ಆಮ್ಲಜನಕದ ಪೂರೈಕೆಯನ್ನು ಹೆಚ್ಚಿಸಿ ಏಕಾಗ್ರತೆಯನ್ನು ವೃದ್ಧಿಸುತ್ತದೆ.

ಇಂದು ಇದನ್ನು ಪ್ರಪಂಚದಾದ್ಯಂತ ವಿವಿಧ ರೂಪಗಳಲ್ಲಿ ಆಚರಿಸಲಾಗುತ್ತಿದೆ ಮತ್ತು ಜನಪ್ರಿಯತೆಯಲ್ಲಿ ಬೆಳೆಯುತ್ತಲೇ ಇದೆ.

ಜಾಗತಿಕವಾಗಿ ಗುರುತಿಸಲ್ಪಟ್ಟ ಈ ದಿನದ ಮಹತ್ವವು ಹಲವಾರು ಪ್ರಮುಖ ಅಂಶಗಳಿಂದ ಬಂದಿದೆ



**★ರಾಷ್ಟ್ರೀಯ ಹೆಮ್ಮೆ:★** ಭಾರತಕ್ಕೆ, ಇದು ಸಾಂಸ್ಕೃತಿಕ ಹೆಮ್ಮೆಯ ಹಂತವಾಗಿದ್ದು, ಜಗತ್ತಿಗೆ ಉಡುಗೊರೆಯಾಗಿ ನೀಡಲಾದ ಪ್ರಾಚೀನ ಸ್ವಾಸ್ಥ್ಯ ಸಂಪ್ರದಾಯವನ್ನು ಆಚರಿಸುತ್ತದೆ.

**★ಖಗೋಳ ಮತ್ತು ಸಾಂಸ್ಕೃತಿಕ ಮಹತ್ವ★:-**

**★ಬೇಸಿಗೆಯ ಅಯನ ಸಂಕ್ರಾಂತಿ:★** ಜೂನ್ 21 ಉತ್ತರ ಗೋಳಾರ್ಧದಲ್ಲಿ ವರ್ಷದ ಅತಿ ಉದ್ದದ ದಿನವಾಗಿದೆ. ಯೋಗ ಸಂಪ್ರದಾಯದಲ್ಲಿ, ಇದು ದಕ್ಷಿಣಾಯನಕ್ಕೆ ಪರಿವರ್ತನೆಯನ್ನು ಸೂಚಿಸುತ್ತದೆ ಮತ್ತು ಆಂತರಿಕ ಬೆಳವಣಿಗೆ ಮತ್ತು ಆಧ್ಯಾತ್ಮಿಕ ರೂಪಾಂತರಕ್ಕೆ ಹೆಚ್ಚು ಬೆಂಬಲ ನೀಡುವ ಅವಧಿಯನ್ನು ಪ್ರತಿನಿಧಿಸುತ್ತದೆ.

**★ಆದಿಯೋಗಿಯೊಂದಿಗಿನ ಸಂಪರ್ಕ:★** ಭಾರತೀಯ ಪುರಾಣಗಳಲ್ಲಿ, ಈ ದಿನಾಂಕವನ್ನು ಬಹಳ ಗೌರವಿಸಲಾಗುತ್ತದೆ ಏಕೆಂದರೆ ಈ ದಿನವು ಶಿವ(ಆದಿಯೋಗಿ) ಸಪ್ತರ್ಷಿಗಳಿಗೆ ಯೋಗದ ಆಳವಾದ ಜ್ಞಾನವನ್ನು ನೀಡಲು ಪ್ರಾರಂಭಿಸಿದ ದಿನವಾಗಿದ್ದು, ಯೋಗ ವಿಜ್ಞಾನವನ್ನು ಮಾನವೀಯತೆಗೆ ತಂದಿತು.

**★ಜಾಗತಿಕ ಪರಿಣಾಮ ಮತ್ತು ಆರೋಗ್ಯ★**

**★ವಿಶ್ವಸಂಸ್ಥೆಯ ಮಾನ್ಯತೆ:★** 2014 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಿಂದ ಸ್ಥಾಪಿಸಲ್ಪಟ್ಟ - ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಪ್ರಸ್ತಾವನೆಯನ್ನು ಅನುಸರಿಸಿ ಮತ್ತು ದಾಖಲೆಯ 175 ಸದಸ್ಯ ರಾಷ್ಟ್ರಗಳಿಂದ ಅನುಮೋದಿಸಲ್ಪಟ್ಟ - ಇದು ಸಾಂಪ್ರದಾಯಿಕ ಸ್ವಾಸ್ಥ್ಯದಲ್ಲಿ ನಾಯಕನಾಗಿ ಭಾರತದ ಪಾತ್ರವನ್ನು ಎತ್ತಿ ತೋರಿಸುತ್ತದೆ.

**★ರೋಗ ತಡೆಗಟ್ಟಿ ಆರೋಗ್ಯ ರಕ್ಷಣೆ:★**

ಯೋಗದ ದೈಹಿಕ ಮತ್ತು ಮಾನಸಿಕ ಆರೋಗ್ಯ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಗುರಿಯಾಗಿದೆ. ದೈಹಿಕ ನಿಷ್ಕ್ರಿಯತೆಯನ್ನು ಕಡಿಮೆ ಮಾಡಲು ಮತ್ತು ಹೃದಯ ಸಂಬಂಧಿ ಕಾಯಿಲೆ ಮತ್ತು ಮಧುಮೇಹದಂತಹ ಪರಿಸ್ಥಿತಿಗಳನ್ನು ನಿರ್ವಹಿಸಲು ವಿಶ್ವ ಆರೋಗ್ಯ ಸಂಸ್ಥೆ ನಂತಹ ಸಂಸ್ಥೆಗಳು ಯೋಗವನ್ನು ಪ್ರತಿಪಾದಿಸುತ್ತವೆ.

**★ವಾರ್ಷಿಕ ವಿಷಯಗಳು:★**

ಪ್ರತಿ ವರ್ಷವೂ ಸ್ವಾಸ್ಥ್ಯದ ವಿಶಿಷ್ಟ ಅಂಶಗಳನ್ನು ಒತ್ತಿಹೇಳುತ್ತದೆ. ಉದಾಹರಣೆಗೆ, 2026 ರ ಥೀಮ್ - ಆರೋಗ್ಯಕರ ವಯಸ್ಸಿಗೆ ಯೋಗ ಎಂಬ ವಿಷಯವು, ಜನರು ದೈಹಿಕವಾಗಿ ಬಲಶಾಲಿಯಾಗಿ, ಮಾನಸಿಕವಾಗಿ ಸ್ಪಷ್ಟರಾಗಿ ಮತ್ತು ವಯಸ್ಸಾದಂತೆ ಉತ್ತಮವಾಗಿರಲು ಸಹಾಯ ಮಾಡುವ ಯೋಗದ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ.

ಯೋಗಾಭ್ಯಾಸದಿಂದಾಗುವ ಹಲವು ಪ್ರಯೋಜನಗಳ ಬಗ್ಗೆ ವಿಶ್ವಾದ್ಯಂತ ಜಾಗೃತಿ ಮೂಡಿಸುವುದು ಅಂತರರಾಷ್ಟ್ರೀಯ ಯೋಗ ದಿನದ ಉದ್ದೇಶವಾಗಿದೆ.

**- ಡಾ ತ್ರಿವೇಣಿ .ವೈ. ಕೌಜಗೇರಿ ಆಯುರ್ವೇದ ತಜ್ಞ ವೈದ್ಯರು**
ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ
ಚಾಮಡಿಹಳ್ಳಿ ಗೇಟ್ ಚನ್ನರಾಯಪಟ್ಟಣ
ಹಾಸನ.

# ಎಐ ಯುಗದಲ್ಲಿ ರೆಕ್ಕೆ ಬಿಚ್ಚಲಿ ಗ್ರಾಮೀಣ ಪ್ರತಿಭೆ

**ಕರ್ನಾಟಕದ ರಾಜಕಾರಣದಲ್ಲಿ ಹೊಸ ತಲೆಮಾರಿನ ಚಿಂತನೆಗಳು ಮತ್ತು ಉದ್ಯೋಗ ಸೃಷ್ಟಿಯ ಭರವಸೆಗಳು ಕೇಳಿ ಬರುತ್ತಿರುವ ಈ ಐತಿಹಾಸಿಕ ಸಂದರ್ಭದಲ್ಲಿ ನಾನು ನನ್ನ ಬದುಕಿನ ಅತ್ಯಂತ ಆಪ್ತವಾದ ಕನಸೊಂದನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಇದು ಕೇವಲ ನನ್ನ ಧ್ವನಿಯಲ್ಲ, ಬದಲಿಗೆ ಬದಲಾವಣೆಗಾಗಿ ಕಾಯುತ್ತಿರುವ ಲಕ್ಷಾಂತರ ಕನ್ನಡಿಗರ ಆಶಯ.**

ಉದ್ಯಮಶೀಲತೆ ಶಿಕ್ಷಣ ಎಂದರೆ ಬದಲಾಗುತ್ತಿರುವ ಜಗತ್ತಿಗೆ ತಕ್ಕಂತೆ ನಮ್ಮನ್ನು ನಾವು ನಿರಂತರವಾಗಿ ನವೀಕರಿಸಿಕೊಳ್ಳುವ ಪ್ರಕ್ರಿಯೆ. ಇಂದು ನಾವು ಕೃತಕ ಬುದ್ಧಿಮತ್ತೆ ಯುಗದಲ್ಲಿದ್ದೇವೆ. ಎಐ ಕೇವಲ ಬೆಂಗಳೂರಿನಂತಹ ಮಹಾನಗರಗಳ ದೊಡ್ಡ ಸಾಫ್ಟ್‌ವೇರ್ ಕಂಪನಿಗಳಿಗೆ ಸೀಮಿತವಾಗಿ ಉಳಿಯಬಾರದು.

ಒಬ್ಬ ಯುವತಿಯಾಗಿ, ಈ ಪ್ರೀತಿಯ ಮಣ್ಣಿನ ಮಗಳಾಗಿ ಸಮಾಜವನ್ನು ನೋಡುವಾಗ ನನಗೆ ಸವಾಲುಗಳನ್ನು ಸಗಟಾಗಿ ಗೆಲ್ಲಬಲ್ಲ ಅಪಾರವಾದ ಯುವಶಕ್ತಿ ಕಾಣಿಸುತ್ತದೆ. ರಾಜಕೀಯದ ಏಳುಬೀಳುಗಳನ್ನು, ಸಮಾಜದ ಆಳ- ಅಗಲಗಳನ್ನು ತೀರಾ ಹತ್ತಿರದಿಂದ ನೋಡಿ ಬೆಳೆದ ಹಿನ್ನೆಲೆ ನನಗಿರುವುದರಿಂದ, ವ್ಯವಸ್ಥೆಯನ್ನು ಕೇವಲ ಟೀಕಿಸುವ ಬದಲು ಅದಕ್ಕೆ ಪರಿಹಾರವಾಗುವುದು ಹೇಗೆ ಎಂಬ ಯೋಚನೆ ನನ್ನಲ್ಲಿದೆ.

ಕರ್ನಾಟಕದ ರಾಜಕಾರಣದಲ್ಲಿ ಹೊಸ ತಲೆಮಾರಿನ ಚಿಂತನೆಗಳು ಮತ್ತು ಉದ್ಯೋಗ ಸೃಷ್ಟಿಯ ಭರವಸೆಗಳು ಕೇಳಿ ಬರುತ್ತಿರುವ ಈ ಐತಿಹಾಸಿಕ ಸಂದರ್ಭದಲ್ಲಿ ನಾನು ನನ್ನ ಬದುಕಿನ ಅತ್ಯಂತ ಆಪ್ತವಾದ ಕನಸೊಂದನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಇದು ಕೇವಲ ನನ್ನ ಧ್ವನಿಯಲ್ಲ, ಬದಲಿಗೆ ಬದಲಾವಣೆಗಾಗಿ ಕಾಯುತ್ತಿರುವ ಲಕ್ಷಾಂತರ ಕನ್ನಡಿಗರ ಆಶಯ.

**ಶಿಕ್ಷಣ ಎಂದರೆ ಬದುಕಿನ ಕೌಶಲ್ಯ**

ನನ್ನ ವೃತ್ತಿಜೀವನವನ್ನು ಶಿಕ್ಷಣ ಕ್ಷೇತ್ರಕ್ಕೆ ಮುಡಿಪಾಗಿಟ್ಟವಳು. ಶಿಕ್ಷಣ ಎಂದರೆ ನಾಲ್ಕು ಗೋಡೆಗಳ ಮಧ್ಯೆ ಕುಳಿತು ಅಂಕ ಗಳಿಸುವುದಲ್ಲ. ಅದು ಬದಲಾಗುತ್ತಿರುವ ಜಗತ್ತಿಗೆ ತಕ್ಕಂತೆ ನಮ್ಮನ್ನು ನಾವು ನಿರಂತರವಾಗಿ ನವೀಕರಿಸಿಕೊಳ್ಳುವ ಪ್ರಕ್ರಿಯೆ. ಇಂದು ನಾವು ಕೃತಕ ಬುದ್ಧಿಮತ್ತೆ ಯುಗದಲ್ಲಿದ್ದೇವೆ. ಎಐ ಎನ್ನುವುದು ಕೇವಲ ಬೆಂಗಳೂರಿನಂತಹ ಮಹಾನಗರಗಳ ದೊಡ್ಡ ಸಾಫ್ಟ್‌ವೇರ್ ಕಂಪನಿಗಳಿಗೆ ಸೀಮಿತವಾಗಿ ಉಳಿಯ ಬಾರದು.

ಹಾವೇರಿ, ಕೊಪ್ಪಳ, ಶಿವಮೊಗ್ಗ ಅಥವಾ ಯಾದಗಿರಿಯ ಸರಕಾರಿ ಕಾಲೇಜಿನ ವಿದ್ಯಾರ್ಥಿಗೂ ಜಾಗತಿಕ ಮಟ್ಟದ ಈ ತಂತ್ರಜ್ಞಾನದ ಪ್ರವೃತ್ತಿಗಳು ಉಚಿತವಾಗಿ ಸಿಗುವಂತಾಗಬೇಕು. ಕರ್ನಾಟಕ ಸರಕಾರವು ಕಾಲೇಜುಗಳಲ್ಲಿ ಎಐ ತರಬೇತಿ ತರಲು ಮುಂದಾಗಿರುವುದು ಸ್ವಾಗತಾರ್ಹ ನಡೆ. ಆದರೆ, ಈ ತಂತ್ರಜ್ಞಾನ ಪ್ರತಿಯೊಬ್ಬ ಸಾಮಾನ್ಯ ಯುವಕ- ಯುವತಿಯ ಕೈಸೇರಿ, ಅವರನ್ನು ಸ್ವಾವಲಂಬಿ ಉದ್ಯೋಗಸ್ಥರನ್ನಾಗಿ ಮಾಡಿದಾಗ ಮಾತ್ರ ಈ ಯೋಜನೆಗೆ ನಿಜವಾದ ಸಾರ್ಥಕತೆ ಸಿಗುತ್ತದೆ.

**ಕಲೆಯ ಮೂಲಕ ಬದುಕು**

ರಾಜಕೀಯ ಹಿನ್ನೆಲೆಯಿಂದ ಬಂದವಳಾಗಿ ನನಗೆ ಚೆನ್ನಾಗಿ ಗೊತ್ತು- ಕೇವಲ ಉಚಿತ ಯೋಜನೆಗಳು ಸಮಾಜದ ಶಾಶ್ವತ ಹಸಿವನ್ನು ನೀಗಿಸಲು ಸಾಧ್ಯವಿಲ್ಲ. ನಮಗೆ ಬೇಕಿರುವುದು ಕರುಣೆಗಿಂತ ಹೆಚ್ಚಾಗಿ ಕೌಶಲ್ಯದ ಸಬಲೀಕರಣ. ಈ ಆಲೋಚನೆಯೇ ನನ್ನನ್ನು ಒಬ್ಬ ಉದ್ಯಮಿಯನ್ನಾಗಿ ರೂಪಿಸಿತು. ನಮ್ಮ ಕರ್ನಾಟಕದ 2ನೇ ಮತ್ತು 3ನೇ ಹಂತದ ನಗರಗಳಲ್ಲಿ, ಅಂದರೆ ನಮ್ಮ ಹಳ್ಳಿ ಹಾಗೂ ಗ್ರಾಮೀಣ ಭಾಗಗಳಲ್ಲಿ ಅದ್ಭುತ ಕಲೆಯಿರುವ ನೂರಾರು ಸಂಗೀತಗಾರರಿದ್ದಾರೆ. ಆದರೆ ಸೂಕ್ತ ವೇದಿಕೆ ಇಲ್ಲದೆ ಅವರ ಕಲೆ ಕತ್ತಲ ಉಳಿದುಹೋಗಿದೆ. ಅಂತಹ ಅಪ್ರತಿಮ ಪ್ರತಿಭೆಗಳನ್ನು ಹುಡುಕಿ, ಅವರಿಗೆ ಆಧುನಿಕ ತಂತ್ರಜ್ಞಾನದ ಅರಿವು ಮೂಡಿಸಿ, ಜಾಗತಿಕ ಮಟ್ಟದ ವೃತ್ತಿಪರ ವೇದಿಕೆ ಕಲ್ಪಿಸಿ ಕೊಡುವ ಒಂದು ಜವಾಬ್ದಾರಿಯನ್ನು ನಾನು ಹೆಗಲಿಗೇರಿಸಿಕೊಂಡಿದ್ದೇನೆ. ಹಳ್ಳಿಯ ಕಡು ಬಡತನದ ಹಿನ್ನೆಲೆಯ ಕಲಾವಿದನೊಬ್ಬ ವೇದಿಕೆಯ ಮೇಲೆ ನಿಂತು ಸ್ವಾಭಿಮಾನದಿಂದ ತನ್ನ ಜೀವನೋಪಾಯ ಕಂಡುಕೊಂಡಾಗ, ಒಬ್ಬ ಮಹಿಳೆಯಾಗಿ ನನ್ನ ಪ್ರಯತ್ನ ಧನ್ಯವಾಯಿತು ಎನಿಸುತ್ತದೆ.



ಮಹಿಳೆಯರಿಗೆ ನನ್ನ ಮಾತಿಷ್ಟೇ- ನಾವು ಈ ಸಮಾಜದಲ್ಲಿ ನೆಟ್ಟಗೆ ನಿಲ್ಲಬೇಕಾದರೆ ನಮಗೆ ಯಾರದ್ದೋ ಸಾಂತ್ವನದ ನುಡಿಗಳು ಬೇಕಿಲ್ಲ, ಬದಲಿಗೆ ಮೂರು ಕಂಬಗಳ ಗಟ್ಟಿ ಆಸರೆ ಬೇಕು. ಒಂದು ಆರ್ಥಿಕ ಸ್ಥಿರತೆ. ಮಹಿಳೆ ತನ್ನ ಕಾಲ ಮೇಲೆ ತಾನು ನಿಂತಾಗ ಸಿಗುವ ಸ್ವಾತಂತ್ರ್ಯವೇ ಬೇರೆ. ಎಐ ಮತ್ತು ಆಧುನಿಕ ತಂತ್ರಜ್ಞಾನ ಕಲಿತರೆ ಮಹಿಳೆಯರು ಮನೆಯ ಕುಳಿತು ಜಾಗತಿಕ ಮಟ್ಟದ ಉದ್ಯೋಗಾವಕಾಶಗಳನ್ನು ಪಡೆಯಬಹುದು. ನಿಮ್ಮ ಬ್ಯಾಂಕ್ ಖಾತೆಯಲ್ಲಿರುವ ಸ್ವಾವಲಂಬನೆ ಯ ಹಣ, ನಿಮಗೆ ಜಗತ್ತನ್ನು ಹೆದರದೆ ಎದುರಿಸುವ ಧೈರ್ಯ ನೀಡುತ್ತದೆ.

**ಎರಡನೆಯದು ಮಾನಸಿಕ ಸ್ಥಿರತೆ:** ಸಮಾಜ ನಮ್ಮನ್ನು ಎಷ್ಟೇ ಕುಗ್ಗಿಸಲು ಪ್ರಯತ್ನಿಸಿದರೂ, ನಮ್ಮ ಆತ್ಮವಿಶ್ವಾಸ ಕುಗ್ಗಬಾರದು. ಸೋಲುಗಳೇ ನಾಯಕತ್ವದ ಮೊದಲ ಪಾಠಗಳು. ಮಾನಸಿಕವಾಗಿ ನಾವು ಗಟ್ಟಿಯಾಗಿದ್ದಾಗ ಮಾತ್ರ ಇಡೀ ಸಮಾಜವನ್ನು ಮುನ್ನಡೆಸುವ ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯ. ಮೂರನೆಯದು ದೈಹಿಕ ಸ್ಥಿರತೆ. ಸೌಂದರ್ಯ ಎನ್ನುವುದು ಕೇವಲ ಮುಖದ ಬಣ್ಣದಲ್ಲಲ್ಲ, ಅದು ನಮ್ಮ ದೈಹಿಕ ಸಾಮರ್ಥ್ಯ ಮತ್ತು ಒಳಗಿನ ಶಕ್ತಿಯಲ್ಲಿದೆ. ನಮ್ಮ ಆರೋಗ್ಯ ಚೆನ್ನಾಗಿದ್ದಾಗ ಮಾತ್ರ ನಾವು ಕುಟುಂಬ, ರಾಜಕಾರಣ ಮತ್ತು ಉದ್ಯಮ ಮೂರನ್ನೂ ಸಮರ್ಥವಾಗಿ ಮುನ್ನಡೆಸಬಲ್ಲೆವು. ಯಾವಾಗ ಒಬ್ಬ ಮಹಿಳೆ ಆರ್ಥಿಕವಾಗಿ ಸ್ವಾವಲಂಬಿಯಾಗಿ, ಮಾನಸಿಕವಾಗಿ ಧೀರಳಾಗಿ, ದೈಹಿಕವಾಗಿ ಸದೃಢಳಾಗುತ್ತಾಳೋ, ಆಗ ಆಕೆ ಇತಿಹಾಸ ಸೃಷ್ಟಿಸುತ್ತಾಳೆ.

**ಯುವ ಮನಸ್ಸಿನ ಸಂಕಲ್ಪ**

ನಾನು ಒಬ್ಬ ಯುವತಿಯಾಗಿ, ನನ್ನ ಮುಂದಿರುವ ಸವಾಲುಗಳನ್ನು ಮತ್ತು ನನ್ನ ರಾಜ್ಯದ ಯುವ ಜನತೆಯ ಕನಸುಗಳನ್ನು ಹತ್ತಿರದಿಂದ ಬ,ಕರ್ನಾಟಕ ಸರಕಾರದ ಇತ್ತೀಚಿನ ಕ್ಯಾಬಿನೆಟ್‌ನ ನಿರ್ಧಾರಗಳಲ್ಲಿ ಉದ್ಯೋಗ ಸೃಷ್ಟಿಗೆ ಹಸಿರು ನಿಶಾನೆ ತೋರಿಸಿರುವುದು ಆಶಾದಾಯಕವಾಗಿದೆ. ಆದರೆ ರಾಜಕೀಯ ನಾಯಕರಲ್ಲಿ ಮತ್ತು ಸಮಾಜದಲ್ಲಿ ನನ್ನ ವಿನಂತಿ ಇಷ್ಟೇ- ನಮ್ಮ ಯುವಶಕ್ತಿಗೆ ಕೇವಲ ಉದ್ಯೋಗ ನೀಡಬೇಡಿ, ಅವರನ್ನು ಜಾಗತಿಕ ಮಟ್ಟದ ಲೀಡರ್‌ಗಳನ್ನಾಗಿ ಮಾಡಲು ಬೇಕಾದ ಕೌಶಲ್ಯ ಕೊಡಿ. ನಾವು ಶಿಕ್ಷಣ, ರಾಜಕೀಯದ ಒಳನೋಟ ಮತ್ತು ಉದ್ಯಮಶೀಲತೆಯ ಅನುಭವದೊಂದಿಗೆ, ನಮ್ಮ ಗ್ರಾಮೀಣ ಪ್ರತಿಭೆಗಳ ಹಾಗೂ ಮಹಿಳೆಯರ ಧ್ವನಿಯಾಗಿ ನಿಲ್ಲಲು ಸಿದ್ಧ. ಕಲೆ, ಶಿಕ್ಷಣ ಮತ್ತು ತಂತ್ರಜ್ಞಾನದ ಸಂಗಮದೊಂದಿಗೆ ನಮ್ಮ ಹೆಮ್ಮೆಯ ಕರ್ನಾಟಕವನ್ನು ಜಾಗತಿಕ ಭೂಪಟದಲ್ಲಿ ಮುಂಚೂಣಿಗೆ ತರೋಣ.

**- ಲಾವಣ್ಯ** ಗೌಡ

# ಟಾಟಾ ಪೆನ್ ಕಳೆದುಕೊಂಡ ಪ್ರಸಂಗ!

**■ ನೋಡಿ, ನನ್ನ ಬಾಲ್ ಪೆನ್ ಕಳೆದುಹೋಗಿದೆ. ಅದು ಎಲ್ಲಿ ಹೋಯಿತು ಅಂತಲೇ ಗೊತ್ತಾಗುತ್ತಿಲ್ಲ. ಎಲ್ಲ ಕಡೆ ಹುಡುಕಿದೆ... ಆದರೆ ಸಿಗುತ್ತಿಲ್ಲ ಎಂದು ತೀವ್ರ ಬೇಸರದಿಂದ ಹೇಳಿದರು. ಅಂದು ಅವರೊಂದಿಗೆ ಟಾಟಾ ಸ್ಟೀಲ್‌ನ ನಿರ್ದೇಶಕರಬ್ಬರಾದ ಡಾ. ಜಮ್ಶೆಡ್ (ಜೆ.ಜೆ.) ಇರಾನಿ ಕೂಡ ಒಬ್ಬರಾಗಿದ್ದರು. ಜೆಆರ್‌ಡಿ ಟಾಟಾ ಅವರ ಬೇಸರವನ್ನು ಇರಾನಿ ಗಮನಿಸಿದರು.**

ಸಂಪಾದಕರ ಸದ್ಯಶೋಧನೆ

ಇತ್ತೀಚೆಗೆ ಉದ್ಯಮಿ ಹರ್ಷ್ ಗೋಯೆಂಕಾ ಅವರು ಒಂದು ಟ್ವೀಟ್ ಮಾಡಿದ್ದರು. ಅದು ಉದ್ಯಮಿ ಜೆಆರ್‌ಡಿ ಟಾಟಾ ಅವರ ಬದುಕಿನ ಒಂದು ಪ್ರಸಂಗವನ್ನು ಕುರಿತದ್ದು. ಇಂದಿನ ಕಾರ್ಪೊರೇಟ್ ಜಗತ್ತಿನಲ್ಲಿ ಲಾಭ ಮತ್ತು ಅಧಿಕಾರವೇ ಪರಮೋಚ್ಚ ಮೌಲ್ಯಗಳಾಗಿರುವಾಗ, ಜೆಆರ್‌ಡಿ ಈ ನಡೆವಳಿಕೆ ನಮಗೆ ಬದುಕಿನ ಅತಿ ದೊಡ್ಡ ಪಾಠವನ್ನು ಕಲಿಸುತ್ತದೆ.

ಜೆಆರ್‌ಡಿ ಟಾಟಾ ಅವರು ಟಾಟಾ ಸಮೂಹ ಸಂಸ್ಥೆಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ನಡೆದ ಘಟನೆ. ಅವರು ಮತ್ತು ಟಾಟಾ ಸಂಸ್ಥೆಯ ಹಿರಿಯ ನಿರ್ದೇಶಕರು ಪ್ರತಿದಿನ ಟಾಟಾ ಸಮೂಹದ ಪ್ರಧಾನ ಕಚೇರಿಯಾದ ಬಾಂಬೆ ಹೌಸ್‌ನಲ್ಲಿ ಒಟ್ಟಿಗೆ ಮಧ್ಯಾಹ್ನದ ಭೋಜನಕ್ಕೆ ಸೇರುತ್ತಿದ್ದರು. ಒಂದು ದಿನ ಜೆಆರ್‌ಡಿ ಅವರು ತಮಗೆ ಅತ್ಯಂತ ಪ್ರಿಯವಾದ ಪೆನ್ ಕಳೆದುಹೋಗಿದೆ ಎಂಬ ಬೇಸರದ ಊಟಕ್ಕೆ ಬಂದರು. ಅವರು ಯಾವಾಗಲೂ ಒಂದು ಪಾರ್ಕರ್ ಪೆನ್ ಸೆಟ್ ಅನ್ನು ತಮ್ಮೊಂದಿಗೆ ಇಟ್ಟು ಕೊಳ್ಳುತ್ತಿದ್ದರು- ಅದರಲ್ಲಿ ಒಂದು ಫೌಂಟನ್ ಪೆನ್ ಮತ್ತು ಮತ್ತೊಂದು ಬಾಲ್ ಪೆನ್ ಇರುತ್ತಿತ್ತು.


ನೋಡಿ, ನನ್ನ ಬಾಲ್ ಪೆನ್ ಕಳೆದುಹೋಗಿದೆ. ಅದು ಎಲ್ಲಿ ಹೋಯಿತು ಅಂತಲೇ ಗೊತ್ತಾಗುತ್ತಿಲ್ಲ. ಎಲ್ಲ ಕಡೆ ಹುಡುಕಿದೆ... ಆದರೆ ಸಿಗುತ್ತಿಲ್ಲ ಎಂದು ತೀವ್ರ ಬೇಸರದಿಂದ ಹೇಳಿದರು. ಅಂದು ಅವರೊಂದಿಗೆ ಟಾಟಾ ಸ್ಟೀಲ್‌ನ ನಿರ್ದೇಶಕರಬ್ಬರಾದ ಡಾ. ಜಮ್ಶೆಡ್ (ಜೆ.ಜೆ.) ಇರಾನಿ ಕೂಡ ಒಬ್ಬರಾಗಿದ್ದರು. ಜೆಆರ್‌ಡಿ ಟಾಟಾ ಅವರ ಬೇಸರವನ್ನು ಇರಾನಿ ಗಮನಿಸಿದರು. ಕೆಲವು ವಾರಗಳ ನಂತರ, ಇರಾನಿ ಅವರು ಲಂಡನ್‌ಗೆ ಭೇಟಿ ನೀಡಿದ್ದಾಗ, ಸೆಲ್ಫ್ರಿಡ್ಜಸ್ ಎಂಬ ಮಾಲ್ ಹತ್ತಿರವಿದ್ದ ಪೆನ್ನುಗಳಿಗೇ ವಿಶೇಷವಾದ ಒಂದು ಸಣ್ಣ ಅಂಗಡಿಗೆ ಹೋದರು. ಅಲ್ಲಿ ಜೆಆರ್‌ಡಿ ಕಳೆದುಕೊಂಡಿದ್ದ ಪೆನ್ನಿನಂತಥದ್ದೇ ಕರಾರುವಾಕ್ಕಾದ ಮತ್ತೊಂದು ಬಾಲ್ ಪೆನ್ ಅವರಿಗೆ ಸಿಕ್ಕಿತು. ಅವರು ತಕ್ಷಣ ಅದನ್ನು ಖರೀದಿಸಿದರು. ಮುಂದಿನ ಬಾರಿ ಜೆಆರ್‌ಡಿ ಟಾಟಾ ಅವರನ್ನು ಭೇಟಿಯಾದಾಗ, ಆ ಪೆನ್ನನ್ನು ಅವರಿಗೆ ಉಡುಗೊರೆಯಾಗಿ ನೀಡಿದರು. ಜೆಆರ್‌ಡಿ ಅವರಿಗೆ ತುಂಬಾ ಸಂತೋಷವಾಯಿತು.

ಹೌದು ಜಮ್ಶೆಡ್, ಇದು ನಾನು ಕಳೆದುಕೊಂಡ ಪೆನ್ನಿನಂತೆಯೇ ಇದೆ ಎಂದರು. ಮೊದಲ ಒಂದೆರಡು ನಿಮಿಷಗಳು ಅವರು ಆ ಪೆನ್ನಿನಿಂದ ಬರೆದು, ಪರೀಕ್ಷಿಸಿ ನೋಡಿದರು. ಆದರೆ, ಅಷ್ಟರ ಡಾ. ಇರಾನಿ ಅವರಿಗೆ ಜೆಆರ್‌ಡಿ ಅವರ ಮುಖಭಾವ ನಿಧಾನವಾಗಿ ಬದಲಾಗುತ್ತಿರುವುದು ಗೋಚರಿಸಿತು. ಎರಡು ನಿಮಿಷಗಳ ನಂತರ, ಅವರು ಆ ಬಾಲ್ ಪೆನ್ನನ್ನು ಮರಳಿ ಡಾ. ಇರಾನಿ ಅವರಿಗೆ ನೀಡುತ್ತಾ ಹೇಳಿದರು- ನಿಮ್ಮ ಈ ಪ್ರೀತಿಯ ಯೋಚನೆಗೆ ಧನ್ಯವಾದಗಳು. ನನಗೆ ಬೇಕಾಗಿದ್ದುದು ಇದೇ. ಆದರೆ ಇದನ್ನು ಸ್ವೀಕರಿಸಲು ನನ್ನಿಂದ ಸಾಧ್ಯವಿಲ್ಲ. ಏಕೆ ಸರ್? ಎಂದು ಡಾ. ಇರಾನಿ ಆಶ್ಚರ್ಯದಿಂದ ಕೇಳಿದರು.

ನೀವು ಇದನ್ನೇ ಹುಡುಕುತ್ತಿದ್ದೀರಿ ಎಂದು ನಾನು ಭಾವಿಸಿದ್ದೆ. ಅದಕ್ಕೆ ಜೆಆರ್‌ಡಿ ಉತ್ತರಿಸಿದರು- ಹೌದು ಜಮ್ಶೆಡ್. ಆದರೆ ಕೆಲಸದ ಜಾಗದಲ್ಲಿ ನನ್ನ ಸಹೋದ್ಯೋಗಿಗಳಿಂದ ಯಾವುದೇ ಉಡುಗೊರೆಗಳನ್ನು ಸ್ವೀಕರಿಸಬಾರದು ಎಂಬುದು ನನ್ನದೊಂದು ತತ್ವ. ನಾನೇನಾದರೂ ಇದನ್ನು ಸ್ವೀಕರಿಸಿದರೆ, ಆಗ ನನ್ನ ಸಹೋದ್ಯೋಗಿಗಳು ಒಬ್ಬರಿಗಿಂತ ಒಬ್ಬರು ಮಿಗಿಲಾಗಿ ನನಗೆ ಅತ್ಯಂತ ದುಬಾರಿ ಉಡುಗೊರೆಗಳನ್ನು ನೀಡಲು ಸ್ಪರ್ಧಿಸುತ್ತಾರೆ ಎಂದು ನನಗೆ ತಿಳಿದಿದೆ. ಡಾ.ಇರಾನಿ ಅವರನ್ನು ಒಪ್ಪಿಸಲು ಪ್ರಯತ್ನಿಸಿದರು. ಆದರೆ ಸರ್, ಈ ಪೆನ್ನನ್ನು ನಿಮಗೆ ನಾನೇ ಕೊಟ್ಟಿದ್ದು ಎಂದು ಯಾರಿಗೂ ಗೊತ್ತಾಗುವುದಿಲ್ಲ. ಇದು ನಿಮ್ಮ ಕೋಣೆಯ ಸಿಕ್ಕಿತು ಎಂದು ನೀವು ಹೇಳಬಹುದು.

ನಾನಂತೂ ಜೆಆರ್‌ಡಿ ಅವರಿಗೆ ಅಂಥದ್ದೇ ಪೆನ್ ಕೊಟ್ಟಿದ್ದೇನೆ ಎಂದು ಎಲ್ಲೂ ಹೇಳಿಕೊಂಡು ತಿರುಗುವುದಿಲ್ಲ. ಅದಕ್ಕೆ ಜೆಆರ್‌ಡಿ ಪ್ರತಿಕ್ರಿಯಿಸಿದರು- ಜಮ್ಶೆಡ್, ನೀವು ಆ ರೀತಿಯಾಗಿ ಮಾಡುವುದಿಲ್ಲ ಎಂದು ನನಗೆ ಚೆನ್ನಾಗಿ ಗೊತ್ತು. ಆದರೆ ಅದು ನನಗೆ ಗೊತ್ತಿರುತ್ತದಲ್ಲವೇ? ನನ್ನ ತತ್ವಗಳಿಗೆ ವಿರುದ್ಧವಾಗಿ ನಾನು ಈ ಉಡುಗೊರೆಯನ್ನು ಸ್ವೀಕರಿಸಿದ್ದೇನೆ ಎಂಬುದು ನನ್ನ ಆತ್ಮಸಾಕ್ಷಿಗೆ ತಿಳಿದಿರುತ್ತದೆ. ದಯವಿಟ್ಟು ಕ್ಷಮಿಸಿ, ಇದನ್ನು ನನ್ನಿಂದ ಸ್ವೀಕರಿಸಲು ಸಾಧ್ಯವಿಲ್ಲ. ನಮ್ಮ ಬದುಕನ್ನು ಯಾವ ತತ್ವಗಳ ಆಧಾರದ ಮೇಲೆ ಮುನ್ನಡೆಸಬೇಕು ಎಂಬುದನ್ನು ನಮ್ಮಲ್ಲಿ ಪ್ರತಿಯೊಬ್ಬರೂ ತಾವೇ ನಿರ್ಧರಿಸಿಕೊಳ್ಳುತ್ತಾರೆ. ಯಾರೂ ನಮ್ಮನ್ನು ಗಮನಿಸದಿದ್ದಾಗ ಅಥವಾ ನಮ್ಮ ಬಗ್ಗೆ ಮಾತನಾಡದಿದ್ದಾಗಲೂ ನಾವು ಗಟ್ಟಿಯಾಗಿ ನಿಲ್ಲುವ ತತ್ವಗಳೇ ನಮ್ಮ ನಿಜವಾದ ವ್ಯಕ್ತಿತ್ವ ಏನೆಂಬುದನ್ನು ವ್ಯಾಖ್ಯಾನಿಸುತ್ತವೆ. ಜೆಆರ್‌ಡಿ ಟಾಟಾ ಅವರ ಕಳೆದುಹೋದ ಈ ಬಾಲ್ ಪೆನ್ನಿನ ಕಥೆಯು ನಮ್ಮ ಬದುಕಿನ ತತ್ವಗಳು ಎಂಥಗಿರಬೇಕು ಎಂದು ನಾವೇ ಆತ್ಮಾವಲೋಕನ ಮಾಡಿ ಕೊಳ್ಳಲು ನೆರವಾಗುತ್ತದೆ.

**- ವಿಶ್ವೇಶ್ವರ** ಭಟ್



# ವಿಪತ್ತು ನಿರ್ವಹಣೆಗೆ ವಿಶೇಷ ಕಾರ್ಯಪಡೆ ರಚನೆ

## ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ಸಕಲೇಶಪುರ ಸಜ್ಜು: 17 ಭೂ ಕುಸಿತ ಪ್ರದೇಶಗಳ ಗುರುತು

• ಪ್ರಜೋದಯ ವರದಿ

**ಸಕಲೇಶಪುರ:** ಮುಂಗಾರು ಅವಧಿಯಲ್ಲಿ ಸಂಭವಿಸಬಹುದಾದ ಭೂಕುಸಿತ, ಅತಿವೃಷ್ಟಿ, ಪ್ರವಾಹ ಸೇರಿದಂತೆ ವಿವಿಧ ನೈಸರ್ಗಿಕ ವಿಪತ್ತುಗಳನ್ನು ಸಮರ್ಥವಾಗಿ ಎದುರಿಸಲು ಸಕಲೇಶಪುರ ಉಪವಿಭಾಗದಲ್ಲಿ ವಿಶೇಷ ವಿಪತ್ತು ನಿರ್ವಹಣಾ ಕಾರ್ಯಪಡೆ ರಚಿಸಲಾಗಿದ್ದು, ಭೂಕುಸಿತ ಸಂಭವನೀಯ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲು ಸಮಗ್ರ ಕಾರ್ಯಯೋಜನೆ ರೂಪಿಸಲಾಗಿದೆ ಎಂದು ಉಪವಿಭಾಗಾಧಿಕಾರಿ ಹುಲೆಮನೆ ತಿಮ್ಮಣ್ಣ ತಿಳಿಸಿದರು.

ಮುಂಗಾರು ಸನ್ನದ್ಧತೆ ಕುರಿತು ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ವಿಪತ್ತು ನಿರ್ವಹಣಾ ಕಾರ್ಯಪಡೆ ಸಮಿತಿ ರಚಿಸಲಾಗಿದ್ದು, ತುರ್ತು ಸಂದರ್ಭಗಳಲ್ಲಿ ತಕ್ಷಣ ಸ್ಪಂದಿಸುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹೇಳಿದರು.



ತಾಲ್ಲೂಕಿನಲ್ಲಿ ಸದ್ಯ 17 ಭೂಕುಸಿತ ಸಂಭವನೀಯ ಪ್ರದೇಶಗಳನ್ನು ಗುರುತಿಸಲಾಗಿದ್ದು, ಅವುಗಳ ಅಪಾಯದ ನಕ್ಷೆ (ಹಜಾರ್ಡ್ ಮ್ಯಾಪಿಂಗ್) ಸಿದ್ಧಪಡಿಸಲಾಗುತ್ತಿದೆ. ಅಗತ್ಯವಿರುವ ಕಡೆಗಳಲ್ಲಿ ಡ್ರೋನ್ ತಂತ್ರಜ್ಞಾನ ಬಳಸಿಕೊಂಡು ಮೇಲ್ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿ ವರ್ಷ ಭೂಕುಸಿತಕ್ಕೆ ತುತ್ತಾಗುವ ರಾಷ್ಟ್ರೀಯ ಹೆದ್ದಾರಿ-75ರ ಸಕಲೇಶಪುರ- ಮಾರನಹಳ್ಳಿ ವ್ಯಾಪ್ತಿಯಲ್ಲಿ ವಿಶೇಷ ನಿಗಾ ವಹಿಸಲಾಗಿದ್ದು, ಅಧಿಕಾರಿಗಳು ಎರಡು ದಿನಕ್ಕೊಮ್ಮೆ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲಿದ್ದಾರೆ. ಅಪಾಯದ ಪ್ರದೇಶಗಳಲ್ಲಿ ಎಚ್ಚರಿಕೆ ಫಲಕಗಳನ್ನು ಅಳವಡಿಸುವುದು, ರಸ್ತೆ ಬದಿಯ ಅಪಾಯಕಾರಿ ಮರಗಳನ್ನು ತೆರವುಗೊಳಿಸುವುದು ಹಾಗೂ ತಡೆಗೋಡೆಗಳ ಸ್ಥಿತಿಯನ್ನು ಪರಿಶೀಲಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ತುರ್ತು ರಕ್ಷಣಾ ಕಾರ್ಯಾಚರಣೆಗೆ ಅಗತ್ಯವಾದ ಕ್ರೇನ್‌ಗಳು, ಆಂಬುಲೆನ್ಸ್‌ಗಳು, ಜನರೇಟರ್ ಹೊಂದಿದ ಬೆಳಕು ವಾಹನಗಳು ಸೇರಿದಂತೆ ಅಗತ್ಯ ಸಲಕರಣೆಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದ್ದು, ಅಪಘಾತದ ಬಳಿಕದ 'ಗೋಲ್ಡನ್ ಅವರ್' ಅವಧಿಯಲ್ಲಿ ತ್ವರಿತ ಚಿಕಿತ್ಸೆ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಮಳೆಗಾಲದಲ್ಲಿ ಮೊಬೈಲ್ ಸಂಪರ್ಕ ವ್ಯತ್ಯಯವಾಗುವ ಪ್ರದೇಶಗಳಲ್ಲಿ ಕಂದಾಯ, ಅರಣ್ಯ ಹಾಗೂ ಪೊಲೀಸ್ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ವೈರ್‌ಲೆಸ್ ಹಾಗೂ ವಾಕಿ-ಟಾಕಿ ವ್ಯವಸ್ಥೆ ಬಳಸಲಾಗುವುದು. ಹೆದ್ದಾರಿ ಹಾಗೂ ಕಂಟ್ರೋಲ್ ರೂಂಗಳ ನಡುವೆ ನಿರಂತರ ಸಂಪರ್ಕ ಕಾಪಾಡಲು 24 ಗಂಟೆಗಳ ನಿಗಾ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ತಾಲ್ಲೂಕು ಮಟ್ಟದಲ್ಲಿ 24×7 ಕಂಟ್ರೋಲ್ ರೂಂ ಹಾಗೂ ವಾರ್ ರೂಂ ಕಾರ್ಯ ನಿರ್ವಹಿಸಲಿದ್ದು, ಅಗತ್ಯವಿದ್ದಲ್ಲಿ ಕಾಳಜಿ ಕೇಂದ್ರಗಳನ್ನು ಆರಂಭಿಸಿ ಕುಡಿಯುವ ನೀರು, ಆಹಾರ ಹಾಗೂ ವೈದ್ಯಕೀಯ ನೆರವು ಒದಗಿಸಲಾಗುವುದು. ಜೂ.23ರಂದು ಆನೆಮಹಲ್ ಅಚೀವರ್ಸ್ ಶಾಲೆ ಮುಂಭಾಗದಲ್ಲಿ ಎನ್‌ಡಿಆರ್‌ಎಫ್ ಸಹಯೋಗದಲ್ಲಿ ಭೂಕುಸಿತ ಜಾಗೃತಿ ಹಾಗೂ ತುರ್ತು ಪರಿಸ್ಥಿತಿ ನಿರ್ವಹಣೆ ಕುರಿತ ಅಣಕು ಪ್ರದರ್ಶನ (ಮಾಕ್ ಡ್ರಿಲ್) ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಗಂಗಾಧರ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಮಹೇಶ್, ಸರ್ಕಲ್ ಇನ್‌ಸ್ಪೆಕ್ಟರ್ ವನರಾಜ್, ಪುರಸಭೆ ಮುಖ್ಯಾಧಿಕಾರಿ ಮಹದೇಶ್ವರ, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ, ಸಹಾಯಕ ಕೃಷಿ ನಿರ್ದೇಶಕರು, ಅಗ್ನಿಶಾಮಕ ದಳ, ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ವಿಭಾಗ, ಅರಣ್ಯ ಇಲಾಖೆ, ಚೆಸ್ಕಾಂ ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಕ್ಕಳಿಗೆ ತಂದೆಯೇ ಮೊದಲ ಮಾರ್ಗದರ್ಶಕ

## ವಿಶ್ವ ಅಪ್ಪಂದಿರ ದಿನದಲ್ಲಿ ಡಾ.ನಾಗೇಶ್

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಕ್ಕಳಿಗೆ ಉತ್ತಮ ಬದುಕು ಕಟ್ಟಿಕೊಡುವಲ್ಲಿ ತಂದೆಯ ಪಾತ್ರ ಪ್ರಮುಖವಾಗಿರುತ್ತದೆ. ಅವರ ಪ್ರತಿ ಹಂತದ ಬೆಳವಣಿಗೆಯಲ್ಲಿ ಹೆತ್ತವರೇ ಮೊದಲ ಮಾರ್ಗದರ್ಶಕರಾಗಿರುತ್ತಾರೆಂದು ಜ್ಞಾನಸಾಗರ ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆಯ ಅಧ್ಯಕ್ಷ ಡಾ|| ಕೆ.ನಾಗೇಶ್ ಅವರು ಹೇಳಿದರು.

ಪಟ್ಟಣದ ಜ್ಞಾನಸಾಗರ ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆಯಲ್ಲಿ ಏರ್ಪಡಿಸಿದ್ದ ವಿಶ್ವ ಅಪ್ಪಂದಿರ ದಿನ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಬುದ್ದಿ ಹೇಳುವಲ್ಲಿ ಶಿಕ್ಷಕ, ಹಗಲಿರುಳು ದುಡಿದು ಸಾಕುವ ರಕ್ಷಕ ಹಾಗು ಬೆಳೆಸುವ ನಿಟ್ಟಿನಲ್ಲಿ ನಾಯಕನಾಗಿ ಎಲ್ಲಾ ಸಮಯಗಳನ್ನು ಕಾಣಿಸಿಕೊಳ್ಳುವ ಮಹಾನ್ ವ್ಯಕ್ತಿ ಎಂದರೆ ತಂದೆ ಎಂದು ವರ್ಣಿಸಿದರು.

ಬದುಕಿನ ಬಂಡಿ ಎಳೆಯುವ ತಂದೆಯು ತನಗೆ ಅದೆಷ್ಟೇ ಕಷ್ಟಗಳು ಎದುರಾದರೂ ಯಾವುದನ್ನು ತನ್ನವರಿಗಾಗಲಿ ಅಥವಾ ಇತರ ಬಳಿ ವ್ಯಕ್ತಪಡಿಸುವುದಿಲ್ಲ. ಮಡದಿ ಹಾಗು ಮಕ್ಕಳ ಬಯಕೆಗಳನ್ನು ಕಾಲಕಾಲಕ್ಕೆ ಪೂರೈಕೆ ಮಾಡುವಲ್ಲಿ ಶ್ರೀಗಂಧದಂತೆ ತನ್ನ ಜೀವನ ಸವೆಸುವ ತ್ಯಾಗಿ ಎಂದು ಅವರು ತಿಳಿಸಿದರು.

ಸಂಸ್ಥೆಯ ಕಾರ್ಯದರ್ಶಿ ಡಾ.




ಭಾರತಿ ನಾಗೇಶ್ ಅವರು ಮಾತನಾಡಿ, ತಂದೆ ಎಂದರೆ ಆಶ್ರಯ ನೀಡುವ ಆಲದ ಮರವಿದ್ದಂತೆ. ತಾಯಿ ಮಮತೆಯ ತೊಟ್ಟಿಲಾದರೆ ತಂದೆ ಮಕ್ಕಳ ಬದುಕು ರೂಪಿಸುವ ಶಿಲ್ಪಿ. ಮಕ್ಕಳು ಹೆಚ್ಚು ಸಮಯ ತಾಯಿಯರೊಂದಿಗೆ ಸಮಯ ಕಳೆದರೂ ಸಹ ತಂದೆಯ ನಡೆ-ನುಡಿ ಹಾಗೂ ಚಟುವಟಿಕೆಗಳನ್ನು ಅನುಸರಿಸುವುದು ಸ್ವಾಭಾವಿಕ ಸಂಗತಿಯಾಗಿದೆ ಎಂದರು.

ನಾವು ಚಿಕ್ಕವರಿದ್ದಾಗ ತಂದೆ ಹೇಳುವ ಮಾತು ಅಥವಾ ಬುದ್ಧಿವಾದವು ನಮಗೆ ಸಿಟ್ಟು ಬರಿಸುವಂತಿರುತ್ತದೆ. ನಾವು ಬೆಳೆದು ಆ ಸ್ಥಾನಕ್ಕೆ ಬಂದಾಗ ನಮ್ಮ ತಂದೆ ಹೇಳುತ್ತಿದ್ದ ಮಾತಿನ ಹಿಂದಿನ ಅನುಭವ ತಿಳಿಯುತ್ತದೆ. ಹೆತ್ತವರು ಹೇಳಿದ ಮಾತನ್ನು ಪಾಲಿಸಿದರೆ ಬದುಕಿನಲ್ಲಿ ಎಂದಿಗೂ ಸೋಲು ಇರುವುದಿಲ್ಲ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ನಂತರ ಪಾಲಕರಿಗೆ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ಕ್ರೀಡೆಗಳಲ್ಲಿ ವಿಜೇತರಾದ ಪಾಲಕರಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಡೀನ್ ಸುಜಾ ಫಿಲಿಪ್, ಯೋಗೇಶ್, ಶಿಕ್ಷಕ ವೃಂದ, ಪಾಲಕರು ಇತರರಿದ್ದರು.

# ಎಂಸಿಇ ಕಾಲೇಜಿಗೆ ವಿಟಿಯು ಪ್ರಶಸ್ತಿ

## ಕ್ರೀಡಾ ಕ್ಷೇತ್ರದಲ್ಲಿನ ಅತ್ಯುತ್ತಮ ಸಾಧನೆಗೆ 1 ಲಕ್ಷ ರೂ. ನಗದು ಬಹುಮಾನ

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ತಾಂತ್ರಿಕ ಮಹಾ ವಿದ್ಯಾಲಯ (ಎಂಸಿಇ) 202324ನೇ ಶೈಕ್ಷಣಿಕ ವರ್ಷದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ತೋರಿದ ಅತ್ಯುತ್ತಮ ಸಾಧನೆಗಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಬೆಳಗಾವಿಯಿಂದ 1 ಲಕ್ಷ ರೂಪಾಯಿ ನಗದು ಪ್ರಶಸ್ತಿಗೆ ಭಾಜನವಾಗಿದೆ.

ಜೂನ್ 19 ರಂದು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸೆನೆಟ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕ್ರೀಡಾ ಸಾಧಕರ ದಿನ ಮತ್ತು ನಗದು ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿಟಿಯು ಕುಲಪತಿ ಡಾ. ಎಸ್. ವಿದ್ಯಾಶಂಕರ್ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಕಾಲೇಜಿನ ವಿದ್ಯಾರ್ಥಿ ವಿಷಯಗಳ ಸಹ ಡೀನ್ ಡಾ.ಬಿ.ಎಸ್.ಶಿವಶಂಕರ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕ ಡಿ.ಎಲ್.ಸೋಮಶೇಖರ್ ಅವರು ಕಾಲೇಜಿನ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು.




ಇದೇ ಸಂದರ್ಭದಲ್ಲಿ, 202324ನೇ ಸಾಲಿನಲ್ಲಿ ದಕ್ಷಿಣ ವಲಯ ಹಾಗೂ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿ ವಿಟಿಯು ತಂಡವನ್ನು ಪ್ರತಿನಿಧಿಸಿದ್ದ ಕಾಲೇಜಿನ ವಿದ್ಯಾರ್ಥಿಗಳಾದ ಕೆ.ಎಂ. ಜೀವನ್, ಬಿ.ಸಿ.ಅಂಚಿತ್‌ಗೌಡ, ಯಶಸ್‌ಗೌಡ, ಸಾತ್ವಿಕ್ ಹಾಗೂ ಸುನೀಲ್ ಅವರಿಗೆ ''ವಿಟಿಯು ಸ್ಪೋರ್ಟ್ಸ್ ಅಚೀವರ್ಸ್'' ನಗದು ಬಹುಮಾನ ನೀಡಲಾಯಿತು.

# ಬಸ್ ಟಿಕೆಟ್ ದರ ಏರಿಕೆಗೆ ಚಿಂತನೆ

• ಪ್ರಜೋದಯ ವರದಿ

**ಬೆಂಗಳೂರು:** ಡೀಸೆಲ್ ದರ ಏರಿಕೆ ಹಿನ್ನೆಲೆಯಲ್ಲಿ ಬಸ್ ಟಿಕೆಟ್ ದರ ಹೆಚ್ಚಳದ ಬಗ್ಗೆ ರಾಜ್ಯದ ಎಲ್ಲಾ ಸಾರಿಗೆ ನಿಗಮಗಳು ಈಗಾಗಲೇ ಸರ್ಕಾರದ ಮುಂದೆ ಪ್ರಸ್ತಾಪಿಸಿದ್ದು, ಈ ಬಗ್ಗೆ ಸರ್ಕಾರ ಎಷ್ಟು ಏರಿಕೆ ಮಾಡಬೇಕು ಎನ್ನುವ ಬಗ್ಗೆ ಚಿಂತನೆ ನಡೆಸಿದೆ.

ಈ ಬಗ್ಗೆ ಸಚಿವ ಸಂಪುಟದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್, ಡೀಸೆಲ್ ಬೆಲೆ ತೀವ್ರ ಹೆಚ್ಚಾಗಿದೆ. ಡಿಪೋದ ಬೆಲೆಗೂ, ಖಾಸಗಿಯಾಗಿ ಸಿಗುವ ಡಿಸೆಲ್‌ಗೂ ಅಜಗಾಂತರ ವ್ಯತ್ಯಾಸ ಇದ್ದು, ಅದರ ಬಗ್ಗೆ ವರದಿ ಕೊಡುವಂತೆ ಹೇಳಿದ್ದೇನೆ. ವರದಿ ನೋಡಿಕೊಂಡು ಕೆ.ಎಸ್.ಆರ್.ಟಿ.ಸಿ. ಯನ್ನು ಉಳಿಸಬೇಕು, ಜನರಿಗೂ ಹೊರೆಯಾಗಬಾರದು. ರಾಜ್ಯದ ಹಿತಕ್ಕಾಗಿ ಎಷ್ಟು ಏರಿಸಬೇಕು ಎಂಬ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

# ಆಯಕಟ್ಟಿನ ಗ್ರಾಮಗಳಲ್ಲಿ ಶುಶ್ರೂಷ ಕೇಂದ್ರ ಸ್ಥಾಪನೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಗ್ರಾಮೀಣ ಭಾಗದ ಜನರ ಅನಾರೋಗ್ಯ ಪರಿಸ್ಥಿತಿಗೆ ತಕ್ಷಣವೇ ಚಿಕಿತ್ಸೆಗೆ ಸ್ಪಂದಿಸುವಂತೆ ಆಯ್ದ ಆಯಕಟ್ಟಿನ ಗ್ರಾಮಗಳಲ್ಲಿ ಶುಶ್ರೂಷ ಕೇಂದ್ರಗಳನ್ನು ತೆರೆಯಲಾಗುತ್ತಿದೆ ಎಂದು ಶಾಸಕ ಎಚ್.ಡಿ. ರೇವಣ್ಣ ತಿಳಿಸಿದರು.

ತಾಲೂಕಿನ ದೊಡ್ಡಬ್ಯಾಗತವಳ್ಳಿ ಗ್ರಾಮದಲ್ಲಿ ಶುಶ್ರೂಷ ಕೇಂದ್ರ ಸ್ಥಾಪಿಸಲು ಕಟ್ಟಡ ನಿರ್ಮಾಣಕ್ಕೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಪ್ರಾಥಮಿಕ ಹಂತದಲ್ಲಿ ಲಕ್ಕೂರು ಮತ್ತು ದೊಡ್ಡಬ್ಯಾಗತವಳ್ಳಿ ಗ್ರಾಮದಲ್ಲಿ ತಲಾ 65 ಲಕ್ಷ ರೂ. ವೆಚ್ಚಗೊಳಿಸಿ ಕಟ್ಟಡ ನಿರ್ಮಿಸಲು ಚಲನೆ ನೀಡಿದ್ದೇನೆ. ಶುಶ್ರೂಕರ ವಸತಿ ಅನುಕೂಲತೆ ಮಾಡಲಾಗುವುದು ಎಂದರು.

ದೊಡ್ಡಬ್ಯಾಗತವಳ್ಳಿ ಸುತ್ತಲಿನ ಹಿರಳ್ಳಿಕೊಪ್ಪಲು, ಬಿಲ್ಲೇನಹಳ್ಳಿ, ಕಳ್ಳಿಕೊಪ್ಪಲು ಗ್ರಾಮದಲ್ಲಿ ಯಾರೇ ಅನಾರೋಗ್ಯಕ್ಕೊಳಗಾದರೆ ಮುಂದಿನ ದಿನಗಳಲ್ಲಿ ದೂರದ ಆಸ್ಪತ್ರೆಗೆ ಹೋಗುವ ಮುನ್ನ ಇಲ್ಲಿ ಶುಶ್ರೂಕರನ್ನು ಭೇಟಿ ಮಾಡಬಹುದು. ನಂತದ ದಿನಗಳಲ್ಲಿ ವೈದ್ಯರನ್ನು ವಾರಕ್ಕೆ ಇಂತಿಷ್ಟು ದಿನ ಲಭ್ಯ ಇರುವಂತೆ ನಿಯೋಜಿಸಲಾಗುತ್ತದೆ. ದೊಡ್ಡಬ್ಯಾಗತವಳ್ಳಿ ಗ್ರಾಮದಲ್ಲೇ ಮುಂದೆ ನಮ್ಮ ಸರ್ಕಾರ ಬಂದ ನಂತರ ಕೆಪಿಎಸ್‌ಸಿ ಶಾಲೆ ತೆರೆಯಲು ಪ್ರಯತ್ನಿಸುತ್ತೇನೆ. 1 ರಿಂದ ಪಿಯುಸಿ ವರೆಗೆ ಇಂಗ್ಲೀಷ್ ಕಲಿಕೆ ಸ್ಥಳೀಯ ಗ್ರಾಮದಲ್ಲೇ ಸಿಗುವಂತೆ ಮಾಡ ಬೇಕೆಂಬ ಇಚ್ಛಾಶಕ್ತಿ ಇದೆ ಎಂದು ತಿಳಿಸಿದರು.



ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಪ್ರತಿ ಗ್ರಾಮದಲ್ಲಿ ಸಮುದಾಯ ಭವನ, ಕಾಂಕ್ರಿಟ್ ರಸ್ತೆ, ಚರಂಡಿ ಮತ್ತು ಮನೆ ಹಂಚಿಕೆಗಳನ್ನು ಸಾಕಷ್ಟು ಮಾಡಿದ್ದೇನೆ. ಹೇಮಾವತಿ ನದಿ ನೀರು ಶುದ್ದೀಕರಿಸಿ ಪ್ರತಿ ಗ್ರಾಮಕ್ಕೆ ಕೊಡುವ ವ್ಯವಸ್ಥೆಯಾಗಿದೆ. ಗೊರೂರು, ಶ್ರೀರಾಮದೇವರ ಅಣೆಕಟ್ಟೆ ನಾಲೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಆದರೆ ನೆನೆದು ಕೊಂಡವರ್‍ಯಾರು ? ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಬಿಲ್ಲೇನಹಳ್ಳಿ ರಸ್ತೆ ಹಾಗೂ ಮುಂಡನಹಳ್ಳಿ ಗ್ರಾಮದ ದೇವಾಲಯ ಗೋಪುರ ನಿರ್ಮಾಣಕ್ಕೆ ಆ ಗ್ರಾಮದ ಮುಖಂಡರು ಬೇಡಿಕೆ ಇಟ್ಟರು. ಸದ್ಯದ ಕಾಂಗ್ರೆಸ್ ಸರ್ಕಾರ ದಡಿ ಅನುದಾನ ನಿರೀಕ್ಷಿಸಲಾಗುತ್ತಿಲ್ಲ. ಮುಂದೆ ಗಮನ ಹರಿಸುತ್ತೇನೆ ಎಂಬ ಭರವಸೆ ನೀಡಿದರು.

ಜಿಪಂ ಮಾಜಿ ಸದಸ್ಯ ಕೃಷ್ಣೇಗೌಡ, ಗ್ರಾಮದ ಮುಖಂಡರಾದ ಶಿವಣ್ಣ, ಅಶೋಕ, ಮಲ್ಲೇಶ ಹಾಗೂ ನಂಜಪ್ಪ ಇನ್ನಿತರರು ಉಪಸ್ಥಿತರಿದ್ದರು.

# ಕೃಷಿ ಸಹಾಯಧನ: ರೈತರಿಂದ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಬೇಲೂರು:** 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಕೃಷಿ ಇಲಾಖೆಯಿಂದ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಡಿ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಟ್ರ್ಯಾಕ್ಟರ್, ಪವರ್ ಟಿಲ್ಲರ್ ಕೊಯ್ಲು ಯಂತ್ರ, ನಾಟಿ ಯಂತ್ರ ಸೇರಿದಂತೆ ವಿವಿಧ ಕೃಷಿ ಉಪಕರಣಗಳನ್ನು ಸಹಾಯಧನದಲ್ಲಿ ಪಡೆಯಲು ರೈತರಿಗೆ ಅವಕಾಶ ಕಲ್ಪಿಸಲಾಗಿದೆ.

ಅರ್ಹ ರೈತರು ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬೇಕು. ಟ್ರ್ಯಾಕ್ಟರ್, ಪವರ್ ಟಿಲ್ಲರ್ ಹಾಗೂ ಕೆಲವು ಉಪಕರಣಗಳಿಗೆ ಜೂ.30 ರೊಳಗೆ, ಇತರೆ ಯಂತ್ರೋಪಕರಣಗಳಿಗೆ ಜುಲೈ 15, 31 ಹಾಗೂ ಆಗಸ್ಟ್ 14 ರೊಳಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ರೈತರು ಅಗತ್ಯ ದಾಖಲೆಗಳೊಂದಿಗೆ ತಮ್ಮ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಕೃಷಿ ಇಲಾಖೆ ಕಚೇರಿಯನ್ನು ಸಂಪರ್ಕಿಸಿ ಯೋಜನೆಯ ಸೌಲಭ್ಯ ಪಡೆದುಕೊಳ್ಳುವಂತೆ ತಿಳಿಸಲಾಗಿದೆ.

# ರೆಡ್‌ಕ್ರಾಸ್ ಸಂಸ್ಥೆಯು ಮಾನವೀಯತೆಯ ದ್ಯೋತಕ

• ಪ್ರಜೋದಯ ವರದಿ

**ಅರಕಲಗೂಡು:** ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಯು ಕೇವಲ ಒಂದು ಸಂಘಟನೆಯಲ್ಲ, ಅದೊಂದು ಮಾನವೀಯತೆಯ ದ್ಯೋತಕವಾಗಿದೆ ಎಂದು ಜಿಲ್ಲಾ ರೆಡ್ ಕ್ರಾಸ್ ಘಟಕದ ಸಭಾಪತಿ ಎಚ್.ಪಿ.ಮೋಹನ್ ಅವರು ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಶುಕ್ರವಾರ ನಡೆದ ತಾಲ್ಲೂಕು ರೆಡ್ ಕ್ರಾಸ್ ಘಟಕದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 1863ರಲ್ಲಿ ಸ್ವಿಟ್ಜರ್ಲೆಂಡ್‌ನ ಜಿನೇವಾದಲ್ಲಿ ಒಂದು ಸಣ್ಣ ಕೊಠಡಿಯಲ್ಲಿ ಸ್ಥಾಪನೆಯಾದ ರೆಡ್‌ಕ್ರಾಸ್ ಸಂಸ್ಥೆ ಇಂದು ಜಗತ್ತಿನ 180ಕ್ಕೂ ಹೆಚ್ಚು ದೇಶಗಳಲ್ಲಿ 290ಕ್ಕೂ ಅಧಿಕ ಶಾಖೆಗಳೊಂದಿಗೆ ವಿಸ್ತರಿಸಿದೆ ಎಂದು ಮಾಹಿತಿ ನೀಡಿದರು.

ಯುದ್ಧ ಭೂಮಿಯಲ್ಲಿ ಗಾಯಗೊಂಡ ಸೈನಿಕರಿಗೆ ಯಾವುದೇ ತಾರತಮ್ಯವಿಲ್ಲದೆ ಚಿಕಿತ್ಸೆ ನೀಡುವ ಮೂಲಕ ಶುರುವಾದ ಈ ಸೇವೆ, ಇಂದು ನೈಸರ್ಗಿಕ ಹಾಗೂ ಮಾನವ ನಿರ್ಮಿತ ವಿಪತ್ತುಗಳ ಸಮಯದಲ್ಲಿ ಮುಂಚೂಣಿಯಲ್ಲಿ ನಿಂತು ಕಾರ್ಯ ನಿರ್ವಹಿಸುತ್ತಿದೆ. ಸಂಸ್ಥೆಯ ಈ ನಿಸ್ವಾರ್ಥ ಮಾನವೀಯ ಸೇವೆಗಾಗಿ ನಾಲ್ಕು ಬಾರಿ ಪ್ರತಿಷ್ಠಿತ ನೊಬೆಲ್ ಶಾಂತಿ ಪುರಸ್ಕಾರ ಲಭಿಸಿರುವುದು ಇದರ ಹೆಗ್ಗಳಿಕೆಯಾಗಿದೆ. ರಾಷ್ಟ್ರಮಟ್ಟದಲ್ಲಿ ರಾಷ್ಟ್ರಪತಿಗಳು ಹಾಗೂ ರಾಜ್ಯಮಟ್ಟದಲ್ಲಿ ರಾಜ್ಯಪಾಲರು ಈ ಸಂಸ್ಥೆಯ ಅಧ್ಯಕ್ಷರಾಗಿರುತ್ತಾರೆ ಎಂದು ತಿಳಿಸಿದರು.



ಹಾಸನ ಜಿಲ್ಲಾ ಮತ್ತು ತಾಲ್ಲೂಕು ರೆಡ್‌ಕ್ರಾಸ್ ಘಟಕಗಳು ಸೇವಾ ಕಾರ್ಯಗಳಲ್ಲಿ ಮುಂಚೂಣಿಯಲ್ಲಿವೆ. ಹಾಸನದಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಉಚಿತ ಕ್ಲಿನಿಕ್ ನಡೆಸಲಾಗುತ್ತಿದ್ದು, 12 ರಿಂದ 15 ಮಂದಿ ತಜ್ಞ ವೈದ್ಯರು ಉಚಿತವಾಗಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಇಂದಿನ ಯುವಜನತೆ ಮೊಬೈಲ್ ಗೀಳಿಗೆ ಅಂಟಿಕೊಳ್ಳದೆ, ಪೋಷಕರು ಹಾಗೂ ಗುರುವೃಂದವನ್ನು ಗೌರವಿಸುವ ಜತೆಗೆ ಸೇವಾ ಮನೋಭಾವನೆಯನ್ನು ರೂಢಿಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಎಳೆಯ ವಯಸ್ಸಿನಲ್ಲಿಯೇ ಸೇವಾ ಮನೋಭಾವ ಬೆಳೆಸುವ ಉದ್ದೇಶದಿಂದ ಕೇವಲ 25 ರೂಪಾಯಿ ಶುಲ್ಕದೊಂದಿಗೆ ಜೂನಿಯರ್ ರೆಡ್ ಕ್ರಾಸ್ ಸದಸ್ಯತ್ವವನ್ನು ನೀಡಲಾಗುತ್ತಿದೆ ಎಂದರು.

ವಿಶ್ವ ರೆಡ್ ಕ್ರಾಸ್ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ ರಾಜ್ಯ ಮಟ್ಟದ ಕಿರಿಯ ರೆಡ್‌ಕ್ರಾಸ್ ಪರೀಕ್ಷೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಹಾಗೂ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ ಶಿಕ್ಷಕರನ್ನು ಅಭಿನಂದಿಸಿ ಪ್ರಮಾಣಪತ್ರ ವಿತರಿಸಲಾಯಿತು.

ದೊಡ್ಡಮಠದ ಮಠಾಧೀಶ ಮಲ್ಲಿಕಾರ್ಜುನ ಸ್ವಾಮೀಜಿ, ತಾಲ್ಲೂಕು ರೆಡ್ ಕ್ರಾಸ್ ಘಠಕದ ಸಭಾಪತಿ ವಿ.ಎ.ನಂಜುಂಡಸ್ವಾಮಿ, ಜಿಲ್ಲಾ ಘಟಕದ ಕಾರ್ಯದರ್ಶಿ ಶಬ್ಬೀರ್ ಅಹಮದ್, ನಿರ್ದೇಶಕ ಉದಯ ಕುಮಾರ್, ತಾಲ್ಲೂಕು ರೆಡ್‌ಕ್ರಾಸ್ ಘಟಕದ ಉಪಸಭಾಪತಿ ದೊಡ್ಡೇಗೌಡ, ಪ್ರಧಾನ ಕಾರ್ಯದರ್ಶಿ ಎಂ.ಎಲ್ ಶಿವಕುಮಾರ್, ಸಹ ಕಾರ್ಯದರ್ಶಿ ದಶರಥ, ನಿರ್ದೇಶಕರಾದ ಪೂನಾರಾಮ್, ಎ.ಜಿ.ರಾಮಚಂದ್ರ, ಪಿ.ಬಿ.ವಿರೂಪಾಕ್ಷ, ಎಂ.ಸಿ. ಉಮೇಶ್‌ಕುಮಾರ್, ಪ್ರವೀಣ್ ಕುಮಾರ್, ಮೂಡ್ಲಿಗೌಡ ಇನ್ನಿತರರು ಉಪಸ್ಥಿತರಿದ್ದರು.



**ಹಾಸನ: ದೇಶಾದ್ಯಂತ ಜೂ.21 ರಂದು ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ನಗರದ ಆರ್.ಸಿ. ರಸ್ತೆಯಲ್ಲಿನ ಗಂಧದಕೋಠಿ ಬಾಲಕರ ಪ್ರೌಢಶಾಲೆಯಲ್ಲಿ ಐದು ದಿನಗಳ ಯೋಗ ತರಬೇತಿ ಶನಿವಾರ ಮುಕ್ತಾಯಗೊಂಡಿತು. ದೈಹಿಕ ಶಿಕ್ಷಣ ಶಿಕ್ಷಕಿ ಗೀತ ಪ್ರಭು, ಯೋಗ ಶಿಕ್ಷಕಿ ಅಶ್ವಿನಿ ಟಿ.ಜಿ ಅವರ ನೇತೃತ್ವದಲ್ಲಿ ನಡೆದ ಯೋಗಾಸನಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ಯೋಗಾಸನಗಳ ಪ್ರದರ್ಶನ ಮಾಡಿದರು. ಇದೇ ಸಂದರ್ಭದಲ್ಲಿ ಯೋಗ ಶಿಕ್ಷಕಿಯನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ಉಪ ಪ್ರಾಂಶುಪಾಲರಾದ ಡಿ.ಎಸ್.ನಿರ್ಮಲಾ ಸಹ ಶಿಕ್ಷರಾದ ಪೂರ್ಣಿಮಾ, ಲಿಂಗರಾಜು, ಲೋಕೇಶ, ಗೌತಮಿ, ಗಣೇಶ್, ಮಂಜುನಾಥ್, ಗೋವಿಂದರಾಜು, ಸುಮಾ, ಮಂಜುಳಾ, ಬೈರಪ್ಪ ಇನ್ನಿತರರು ಹಾಜರಿದ್ದರು.**

# ಮೃತ ರೈತನ ಕುಟುಂಬಕ್ಕೆ ಸಿಗಬೇಕಾದ ಪರಿಹಾರ ಬೇರೊಬ್ಬರ ಪಾಲು

ಹೊಳೆನರಸೀಪುರ: ಅಧಿಕಾರಿಗಳ ಯಡವಟ್ಟಿನಿಂದ ಮೃತ ರೈತನ ಕುಟುಂಬಕ್ಕೆ ಸಿಗಬೇಕಾದ ಪರಿಹಾರದ ಹಣ ಬೇರೊಬ್ಬರ ಪಾಲಾದ ಘಟನೆ ತಾಲ್ಲೂಕಿನ ಹಳೇಕುಂಚೆವು ಗ್ರಾಮದಲ್ಲಿ ನಡೆದಿದೆ.

ಕಳೆದ ವರ್ಷ ಸಾಲಬಾಧೆಯಿಂದ ರೈತ ಹೆಚ್.ಜೆ. ರಂಗಸ್ವಾಮಿ ಅವರು ತನ್ನ ಜಮೀನಿನಲ್ಲಿ ತೆಂಗಿನಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು. ಅವರ ಪತ್ನಿ ಜಯಮ್ಮ ಪರಿಹಾರಕ್ಕಾಗಿ ಅರ್ಜಿ ಹಾಕಿ ಕೃಷಿ ಇಲಾಖೆ, ತಹಶೀಲ್ದಾರ್ ಕಚೇರಿ ಅಲೆದಾಡಿದ್ದು, ಪರಿಹಾರದ ಹಣ ನಿಮ್ಮ ಖಾತೆಗೆ ಬರುತ್ತದೆ ಎಂದು ಅಧಿಕಾರಿಗಳು ಹಾರಿಕೆ ಉತ್ತರ ನೀಡುತ್ತಲೇ ಇದ್ದರು.

ಅಧಿಕಾರಿಗಳ ನಡೆಯಿಂದ ಬೇಸತ್ತ ಜಯಮ್ಮ ಗ್ರಾಮಸ್ಥರೊಂದಿಗೆ ಕೃಷಿ ಇಲಾಖೆ, ತಹಶೀಲ್ದಾರ್ ಕಚೇರಿಗೆ ತೆರಳಿ ವಿಚಾರಿಸಿದ ವೇಳೆ ಅಧಿಕಾರಿಗಳು ಮಾಡಿರುವ ಯಡವಟ್ಟು ಬಯಲಾಗಿದೆ. ಅಧಿಕಾರಿಗಳ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯದಿಂದ ಹೊಳೆನರಸೀಪುರ ತಾಲ್ಲೂಕಿನ ಹಳೆಕೋಟೆ ಹೋಬಳಿ ಅರೆಕಲ್ಲು ಹೊಸಳ್ಳಿ ಗ್ರಾಮದ ರಂಗೇಗೌಡ ಎಂಬುವವರ ಪತ್ನಿ ಜಯಮ್ಮ ಅವರ ಬ್ಯಾಂಕ್ ಖಾತೆಗೆ 5 ಲಕ್ಷ ರೂ. ಪರಿಹಾರದ ಮೊತ್ತ ವರ್ಗಾವಣೆಯಾಗಿರುವುದು ಬೆಳಕಿಗೆ ಬಂದಿದೆ.

ಜಯಮ್ಮ ಅವರ ಖಾತೆಯಿಂದ ಹಣ ವಾಪಾಸ್ ಪಡೆಯಲು ಅಧಿಕಾರಿಗಳು ಪರದಾಡುತ್ತಿದ್ದು, ಸತ್ಯಾಂಶ ಹೊರ ಬರುತ್ತಲೇ ಕೃಷಿ ಇಲಾಖೆ ಅಧಿಕಾರಿ ಹಾಗೂ ತಹಶೀಲ್ದಾರ್ ಅವರು ಪೇಚಿಗೆ ಸಿಲುಕಿದ್ದಾರೆ.

# ಆರೋಗ್ಯ ಉಪ ಕೇಂದ್ರ ನಿರ್ಮಾಣಕ್ಕೆ ಚಾಲನೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಲಕ್ಕೂರು ಗ್ರಾಮದಲ್ಲಿ ಆಯುಷ್ ಇಲಾಖೆಯ ಆರೋಗ್ಯ ಉಪ ಕೇಂದ್ರದ ನಿರ್ಮಾಣ ಕಾಮಗಾರಿಗೆ ಸಂಸದ ಶ್ರೇಯಸ್ ಪಟೇಲ್ ಅವರು ಶನಿವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಈ ಆರೋಗ್ಯ ಕೇಂದ್ರ ಮಹತ್ವದ ಪಾತ್ರ ವಹಿಸಲಿದೆ. ಸ್ಥಳೀಯ ಜನರ ಬಹುಕಾಲದ ಬೇಡಿಕೆ ಈಡೇರುವಂತಾಗಿದೆ ಎಂದರಲ್ಲದೆ, ಆರೋಗ್ಯ ಸೌಲಭ್ಯಗಳು ಮತ್ತಷ್ಟು ಜನಸ್ನೇಹಿಯಾಗಿ ಹಾಗೂ ಸುಲಭವಾಗಿ ಲಭ್ಯವಾಗುವ ದಿಸೆಯಲ್ಲಿ ಈ ಕಾಮಗಾರಿ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರು, ಮುಖಂಡರು ಹಾಗು ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



**ಹಾಸನ: ಪತ್ರಿಕಾ ದಿನಾಚರಣೆ ಅಂಗವಾಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ವಾರ್ಷಿಕ ಕ್ರೀಡಾಕೂಟ ಆಯೋಜಿಸಿದ್ದು ಶನಿವಾರ ಕೇರಂ ಪಂದ್ಯಾವಳಿ ನಡೆಯಿತು. ಸಂಘದ ಉಪಾಧ್ಯಕ್ಷ ಜಿ.ಪ್ರಕಾಶ್, ಪತ್ರಕರ್ತ ಜಗದೀಶ್ ಅವರು ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಡಬಲ್ಸ್‌ನಲ್ಲಿ ಪತ್ರಕರ್ತರಾದ ಜಿ.ಪ್ರಕಾಶ್ ಮತ್ತು ಆರ್.ಎನ್.ಸುಗಂಧರಾಜು ಪ್ರಥಮ, ಅಭಿಜಿತ್ ಮತ್ತು ಪ್ರಶಾಂತ್ ದ್ವಿತೀಯ ಹಾಗು ಸಾಗರ್ ಹಾಗು ಜೈಕುಮಾರ್ ತೃತೀಯ ಸ್ಥಾನ ಗಳಿಸಿದ್ದಾರೆ. ಸಿಂಗಲ್ಸ್‌ನಲ್ಲಿ ನಾಗರಾಜ್ ಪ್ರಥಮ, ಆರ್.ಎನ್. ಸುಗಂಧರಾಜು ದ್ವಿತೀಯ ಹಾಗು ಅಭಿಜಿತ್ ತೃತೀಯ ಸ್ಥಾನ ಪಡೆದಿದ್ದಾರೆ.**

## ವಿಧಾನಸಭಾ ಕ್ಷೇತ್ರದ ಬಿಜೆಪಿ ಬಿ.ಎಲ್2 ಕಾರ್ಯಕರ್ತರ ಕಾರ್ಯಾಗಾರಕ್ಕೆ ದತ್ತಾತ್ರಿ ಚಾಲನೆ

# ಮತದಾರರ ಪಟ್ಟಿಯಲ್ಲಿ ಅರ್ಹರ ಕೈಬಿಡದಂತೆ ಜಾಗೃತಿ ವಹಿಸಿ


• ಪ್ರಜೋದಯ ವರದಿ

**ಸಕಲೇಶಪುರ:** ಮತದಾನದ ಹಕ್ಕು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಶಕ್ತಿಯಾಗಿದ್ದು, ಮತದಾರರ ಪಟ್ಟಿಯ ಶುದ್ಧೀಕರಣ ಹಾಗೂ ನೈಜ ಮತದಾರರ ಗುರುತಿಸುವಿಕೆಗೆ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಮಹತ್ವದ ಪ್ರಕ್ರಿಯೆಯಾಗಿದೆ ಎಂದು ರಾಜ್ಯ ಬಿಜೆಪಿ ಎಸ್‌ಐಆರ್ ಸಂಚಾಲಕ ದತ್ತಾತ್ರಿ ಹೇಳಿದರು.

ನಗರದ ಶಿನಪ್ಪಶೆಟ್ಟಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಬಿಜೆಪಿ ಬಿ.ಎಲ್2 ಕಾರ್ಯಕರ್ತರ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ವರ್ಷ ನಡೆಯುವ ಸಾಮಾನ್ಯ ಮತದಾರರ ಪಟ್ಟಿ ಪರಿಷ್ಕರಣೆಗೆ ಹೋಲಿಸಿದರೆ ಈ ಬಾರಿ ವಿಶೇಷ ಸಮಗ್ರ ಪರಿಷ್ಕರಣೆ ಕೈಗೊಳ್ಳಲಾಗುತ್ತಿದ್ದು, ಕಾರ್ಯ ಕರ್ತರು ಮನೆಮನೆಗೆ ತೆರಳಿ ಮತದಾರರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಜೂನ್ 30ರಿಂದ ಜುಲೈ 29ರವರೆಗೆ ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿಯ ಪರಿಶೀಲನೆ ಹಾಗೂ ಹೊಂದಾಣಿಕೆ ಕಾರ್ಯ ನಡೆಸಲಿದ್ದು, ಈ ಪ್ರಕ್ರಿಯೆಗೆ ಪಕ್ಷದ ಕಾರ್ಯಕರ್ತರು ಸಹಕರಿಸಬೇಕು ಎಂದರಲ್ಲದೆ, ಯಾವುದೇ ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಕೈಬಿಡದಂತೆ ಎಚ್ಚರಿಕೆ ವಹಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಪ್ರಜಾಪ್ರಭುತ್ವದ ಬಲವರ್ಧನೆಗೆ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.

ಬಿಜೆಪಿ ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹಾಗೂ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಎಸ್ ಐಆರ್ ಉಸ್ತುವಾರಿ ಡಾ.ನವೀನ್ ಅವರು ಮಾತನಾಡಿ, ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ಕಾರ್ಯಕರ್ತರು ಗಂಭೀರವಾಗಿ ಪರಿಗಣಿಸಿ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.



ಮತದಾರರ ಪಟ್ಟಿ ಪರಿಷ್ಕರಣೆ ಹೊಸ ಪ್ರಕ್ರಿಯೆಯಲ್ಲ. ನಗರೀಕರಣ, ವಲಸೆ ಹಾಗೂ ಹೊಸ ಮತದಾರರ ಸೇರ್ಪಡೆ ಹಿನ್ನೆಲೆಯಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಅಗತ್ಯವಾಗಿದೆ ಎಂದ ಅವರು, ಬೂತ್ ಮಟ್ಟದಲ್ಲಿ ಮನೆ ಮನೆಗೆ ಭೇಟಿ ನೀಡಿ ಮತದಾರರಲ್ಲಿ ಜಾಗೃತಿ ಮೂಡಿಸಬೇಕು. ವಿಶೇಷವಾಗಿ ವಯೋ ವೃದ್ಧರು, ಕಾರ್ಮಿಕರು, ಅಕ್ಷರಜ್ಞಾನ ಕಡಿಮೆ ಇರುವವರು ಹಾಗೂ ಹೊಸ ಮತದಾರರ ವಿವರಗಳ ಪರಿಶೀಲನೆಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಒಂದೇ ವ್ಯಕ್ತಿಯ ಹೆಸರು ಎರಡು ಸ್ಥಳಗಳಲ್ಲಿ ಮತದಾರರ ಪಟ್ಟಿಯಲ್ಲಿ ಇರುವುದನ್ನು ಕಾನೂನುಬಾಹಿರ ಎಂದು ಪರಿಗಣಿಸಲಾಗುತ್ತಿದ್ದು, ಪರಿಶೀಲನೆ ವೇಳೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

**ಚುನಾವಣೆಯಷ್ಟೇ ಮಹತ್ವ ಎಸ್‌ಐಆರ್‌ಗೂ: ಶಾಸಕ ಸಿಮೆಂಟ್ ಮಂಜು**

ಶಾಸಕ ಸಿಮೆಂಟ್ ಮಂಜು ಮಾತನಾಡಿ, ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ಬಿಜೆಪಿ ಕಾರ್ಯಕರ್ತರು ಗಂಭೀರ ವಾಗಿ ಪರಿಗಣಿಸಿ ಪ್ರತಿಯೊಂದು ಬೂತ್ ಮಟ್ಟದಲ್ಲೂ ಸಕ್ರಿಯವಾಗಿ ಕೆಲಸ ಮಾಡಬೇಕು. ಚುನಾವಣಾ ಸಂದರ್ಭದಲ್ಲಿ ಅಭ್ಯರ್ಥಿಗಳ ಗೆಲುವಿಗಾಗಿ ತೋರಿಸುವ ಬದ್ಧತೆ ಹಾಗೂ ಪರಿಶ್ರಮವನ್ನು ಮತದಾರರ ಪಟ್ಟಿ ಪರಿಷ್ಕರಣೆಯಲ್ಲೂ ತೋರಬೇಕು ಎಂದು ಕರೆ ನೀಡಿದರು.

ಎಸ್‌ಐಆರ್‌ನ ಉದ್ದೇಶ ನೈಜ ಮತದಾರರ ಹೆಸರು ಪಟ್ಟಿಯಲ್ಲಿ ಉಳಿಯುವಂತೆ ನೋಡಿಕೊಳ್ಳುವುದು, ಹೊಸ ಅರ್ಹ ಮತದಾರರನ್ನು ಸೇರ್ಪಡೆ ಮಾಡುವುದು ಹಾಗೂ ಅನರ್ಹ ಹೆಸರುಗಳನ್ನು ಪರಿಶೀಲ ನೆಯ ಮೂಲಕ ತೆರವುಗೊಳಿಸುವುದಾಗಿದೆ. ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಮತದಾರರಿಗೆ ಅಗತ್ಯ ದಾಖಲೆಗಳು ಹಾಗೂ ಪ್ರಕ್ರಿ ಯೆಯ ಕುರಿತು ಮಾಹಿತಿ ನೀಡಬೇಕು. ಬೂತ್ ಮಟ್ಟದ ಏಜೆಂಟರು ಹಾಗೂ ಕಾರ್ಯಕರ್ತರು ಸಮನ್ವಯದಿಂದ ಕೆಲಸ ಮಾಡಿದರೆ ಮುಂದಿನ ಚುನಾವಣಾ ಸಿದ್ಧತೆಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಯಾವುದೇ ಅರ್ಹ ಮತದಾರರ ಮತದಾನದ ಹಕ್ಕು ಕಸಿಯದಂತೆ ಎಚ್ಚರಿಕೆ ವಹಿಸಿ ಎಸ್‌ಐಆರ್ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಮೈಸೂರು ವಿಭಾಗೀಯ ಪ್ರಭಾರಿ ಅಶ್ವಿನಿ ಶಂಕರ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಜಿಲ್ಲಾ ಪ್ರಧಾನ ಕಾರ್ಯ ದರ್ಶಿಗಳಾದ ಅಮಿತ್‌ಶೆಟ್ಟಿ, ಕ್ಯಾಮನ ಹಳ್ಳಿ ರಾಜ್ ಕುಮಾರ್, ಸಕಲೇಶಪುರ ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಆಲೂರು ಮಂಡಲ ಅಧ್ಯಕ್ಷೆ ಉಮಾ ರವಿಕುಮಾರ್, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಅಗ್ನಿ ಸೋಮಶೇಖರ್, ಮಧು ಬೊಮ್ಮನಕೆರೆ ಸೇರಿದಂತೆ ವಿಧಾನಸಭಾ ಕ್ಷೇತ್ರದ ಎಲ್ಲಾ ಬಿ.ಎಲ್2 ಕಾರ್ಯಕರ್ತರು ಉಪಸ್ಥಿತರಿದ್ದರು.

